Clauses 2 to 6

MR. DEPUTY SPEAKER.—The question is .—

" That Clauses 2 to 6, both inclusive, do stand part of the Bill "

The motion was adopted

Clauses 2 to 6, both inclusive, were added to the Bill.

Clause 1, ETC

MR. DEPUTY SPEAKER.— The question is.—

"That Clause I, the long Tittle the Preamble and the Enacting Formula do stand part of the Bill. "

The motion was adopted

Clause I, the Long Title the Preamble and Enacting Formula were added to the Bill.

Motion to pass

SRI. C. N. PATIL (Minister for Labour) .— Sir, I move :

That the Karnataka Labour Welfare Fund (Amendment) Bill, 1976, be passed. "

MR. DEPUTY SPEAKER.— The question is .—

"That the Karnataka Labour Welfare Fund (Amendment) Bill, 1976 be passed. "

The motion was adopted and the Bill was passed.

Karnataka Preservation of Trees Bill 1976
Message from the Governor

MR. DEPUTY SPEAKER.—I have received the recommendation of the Governor for the consideration of the Karnataka Preservation of Trees Bill, 1976.

motion to consider

SRI H, C. SRIKANTAIAH (Minister of State for Forests).— Sir, I beg to move :

" That the Karnataka Preservation of Trees Bill, 1976, be taken into consideration. "

MR. DEPUTY SPEAKER.— Motiod moved.

"That the Karnataka Preservation of Trees Bill, 1976, be taken into coasideration "

† ಶ್ರೀ ಎಚ್. ಸಿ ಶ್ರೀಕಂಠಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ವೃಕ್ಷಸಂರಕ್ಷಣೆ ಕಾಯಿದೆಯನ್ನು ತಂದಿರುವ ಉದ್ದೇಶ ಈಗಾಗಲೇ ಸನ್ಮಾನ್ಯ ಸದಸ್ಯರಿಗೆಲ್ಲಾ ತಿಳಿದಿದೆ. ಈಗ ನಮ್ಮ ದೇಶದಲ್ಲಿ ಈ ಮರಗಳನ್ನು ನಾಶ ಮಾಡುವ ವಿಚಾರದಲ್ಲಿ ಅನೇಕ ವಿಧಾನಗಳು ನಡೆಯುತ್ತಿವೆ. ಅದನ್ನು ತಡೆಗಟ್ಟುವ ಸಲುವಾಗಿ ಈ ಮಸೂದೆಯನ್ನು ಜಾರಿಗೆ ತರಲಾಗುತ್ತಿದೆ. ಈ ಮಸೂದೆಯು ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಸಾಮಾನ್ಯರಿಗೆ ಯಾವುದೇ ತೆರನಾದಂಥ ತೊಂದರೆ ಮಾಡುವಂತಹ ಉದ್ದೇಶವನ್ನು ಸರ್ಕಾರ ಹೊಂದಿಲ್ಲ ಬಹುಮುಖ್ಯವಾಗಿ. ಕಾಡನ್ನು ಹಾಗೂ ವೃಕ್ಷಸಂಪತ್ತನ್ನು ಕಡಿದು ಅನಾವಶ್ಯಕವಾಗಿ ಮರಗಳನ್ನು ನಾಶ ಮಾಡಿ, ಅನೇಕ ತರಹದ ಕೆಟ್ಟ ಪ್ರವೃತ್ತಿಯನ್ನು ನಡೆಸುತ್ತಿರುವ ಜನರಿಗೆ ಒಂದು ಕಟ್ಟುಪಾಡು ಹಾಕಿ, ಈ ವೃಕ್ಷ ಸಂರಕ್ಷಣೆ ಮಾಡುವುದು ಸರ್ಕಾರದ ಬಹು ಮುಖ್ಯವಾದ ಕರ್ತವ್ಯವಾಗಿದೆ. ಈಗಾಗಲೇ ನಮ್ಮ ರಾಜ್ಯದ ಹಾಗೂ ರಾಷ್ಟ್ರದ ನಾನಾ ಭಾಗಗಳಲ್ಲಿ ಈ ವೃಕ್ಷ ಸಂಪತ್ತು ಬಹಳ ಕಡಿಮೆಯಾಗಿ, ಈ ದೇಶವು ಕ್ಷಾಮದ ದವಡೆಗೆ ತುತ್ತಾಗುತ್ತಿರುವ ಪ್ರಸಂಗ ಬಂದಿದೆ. ಜೊತೆಗೆ ದೇಶದ ನಾನಾ ಭಾಗಗಳಲ್ಲಿ ಸಕಾಲಕ್ಕೆ ಮಳೆ ಬಾರದೆ ಅನೇಕ ತೊಂದರೆಗಳಾಗುತ್ತಿರುವುದನ್ನು ನಾವು ಕಂಡಿದ್ದೇವೆ. ಅವರಲ್ಲಿಯೂ ಬಹುಮುಖ್ಯವಾಗಿ ಈ ದೇಶದ ಹವಾಮಾನ ಪರಿಸ್ಥಿತಿಯೂ ಸಹ ವ್ಯತ್ಯಾಸವಾಗಿ, ಜನತೆ ನಾನಾ ರೀತಿಯ ರೋಗರುಜಿನಗಳಿಗೆ ತುತ್ತಾಗುತ್ತಿರುವುದನ್ನು ನಾವು ಕಂಡಿದ್ದೇವೆ. ಇದನ್ನೆಲ್ಲಾ ತಡೆಗಟ್ಟುವ ಸಲುವಾಗಿ ಇಂತಹ ಒಂದು ಕಾನೂನನ್ನು ಈಗಾಗಲೇ ನಮ್ಮ ನೆರೆಯ ರಾಜ್ಯವಾದ ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ

ನಾವೂ ಸಹ ಸುಧಾರಿಸಿದ ರೀತಿಯಲ್ಲಿ ಕಾನೂನನ್ನು ಈಗಾಗಲೇ ತಂದಿದ್ದೇವೆ ಬಹು ಮುಖ್ಯವಾಗಿ ದೇಶದಲ್ಲಿರತಕ್ಕ ಕಾಡನ್ನೂ ಹಾಗೂ ಮರಗಳನ್ನು ಉಳಿಸಿರತಕ್ಕದು ಮತ್ತು ಬೆಳೆಸುವುದಕ್ಕೆ ಇನ್ನೂ ಹೆಚ್ಚಿನ ಉತ್ತೇಜನವನ್ನು ಕೊಡುವುದಕ್ಕೋಸ್ಕರ ಈ ಒಂದು ಕಾಯಿದೆಯನ್ನು ನಾವು ತಂದಿದ್ದೇವೆ. ಬಹು ಮುಖ್ಯವಾಗಿ ಅನೇಕ ಮಾನ್ಯ ಮಿತ್ರರು ಈ ಬಗ್ಗೆ ಈ ಮಸೂದೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಸರ್ಕಾರ ಇನ್ನೂ ಉತ್ತಮವಾದ ರೀತಿಯಲ್ಲಿ ಈ ಒಂದು ಕಾನೂನನ್ನು ಜಯಪ್ರದವಾಗಿ ದೇಶದಲ್ಲಿ ಜಾರಿಗೆ ತರುವುದಕ್ಕೆ ಸಹಕಾರಿಯಾಗಬೇಕು, ಮತ್ತು ಸಲಹೆಗಳನ್ನು ಕೊಡಬೇಕು. ಮತ್ತು ನಮ್ಮ ದೇಶದಲ್ಲಿ ಹಸಿರು ಕ್ರಾಂತಿಯನ್ನು ಹರಿಸುವುದಕ್ಕೆ ಕಾಡನ್ನೂ ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಯುವುದಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಹೇಳಿ ವಿನಂತಿ ಮಾಡಿಕೊಂಡು ಇದಕ್ಕೆ ಎಲ್ಲಾ ಮಾನ್ಯ ಸದಸ್ಯರು ಸರ್ವಾನುಮತದ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ,

† ಶ್ರೀ ಟಿ. ಆರ್. ಶಾಮಣ್ಣ —ಸನ್ಮಾನ್ಯ ಸಭಾಪತಿಗಳೇ ಈ ಹಿಂದೆ ನಮ್ಮ ಮುಂದೆ ಮಂಡಿಸಿದ್ದ ಮಸೂದೆಗಳು ಬಹಳ ಬೇಗ ಬೇಗ ಪಾಸಾದುವು ಆದರೆ ಇದು ಬಹು ಮುಖ್ಯವಾದ ಮಸೂದೆಯಾದ್ದರಿಂದ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತದೆ ಎಂದು ನಾನು ನಂಬಿಕೆಯನ್ನು ಇಟ್ಟುಕೊಂಡಿದ್ದೆ. ಈ ಮಸೂದೆಯ ಪ್ರಾಮುಖ್ಯತೆಯ ಬಗ್ಗೆ ಹೇಳುವುದಾದರೆ ಇದರಿಂದ ಪರಿಣಾಮಕಾರಿಯಾಗಿ ವೃಕ್ಷಗಳನ್ನು ಸಂರಕ್ಷಣೆ ಮಾಡತಕ್ಕ ವ್ಯವಸ್ಥೆಯನ್ನು ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ವನಸಂಪತ್ತಿನ ಬಗ್ಗೆ ಬಹಳ ಪುರಾತನ ಕಾಲದಿಂದ ಬಂದಿರತಕ್ಕ ಒಂದು ಯೋಚನೆ ಮಾಡತಕ್ಕ ವಿಚಾರ. ಇದರ ಬಗ್ಗೆ ನಾವು ಎಲ್ಲಾ ವಿಚಾರಗಳಿಗಿಂತಲೂ ಕೂಡ ಅತಿ ಹೆಚ್ಚಿನ ಆದ್ಯಗಮನ ಕೊಡಬೇಕಾದ್ದು ಅತಿ ಮುಖ್ಯವಾದದ್ದು. ರಾಷ್ಟ್ರದ ಹಾಗೂ ರಾಜ್ಯದ ಹವಮಾನ ಮಳೆ ಮತ್ತು ನಾಗರೀಕರಿಗೆ ಬೇಕಾದ ಸೌಲಭ್ಯವನ್ನು ಸೃಷ್ಟಿ ಮಾಡಿ ಅತಿ ಸಂತೋಷವನ್ನುಂಟು ಮಾಡತಕ್ಕ ವಿಚಾರ. ಇದರ ಜೊತೆಗೆ ಈಗ ಹೊಸದಾಗಿ ಬಂದಿರತಕ್ಕ ಈ ತಿದ್ದುಪಡಿಯ ಕಾನೂನಿನ ಪ್ರಯೋಜನವನ್ನು ಉಪಯೋಗಿಸಿಕೊಂಡು ನಾಗರೀಕರಿಗೆ ಬೇಕಾದಂತಹ ವಿದ್ಯುಚ್ಛಕ್ತಿ ಮತ್ತು ಇತರ ಸೌಲಭ್ಯಗಳನ್ನು ಯಾವರೀತಿ ಪಡೆಯಬೇಕು ಎನ್ನುವ ಬಗ್ಗೆ ಇದರಲ್ಲಿ ಅನೇಕ ವಿಚಾರಗಳು ಒಳಗೊಂಡಿವೆ, ದೇಶದ ಕೈಗಾರಿಕೆಗೆ ಹವಮಾನಕ್ಕೆ, ಜನಗಳಿಗೆ ಬೇಕಾದ ಸೌದೆಯನ್ನು ಬೆಳೆಯುವುದಕ್ಕೆ ಮನೆಗಳನ್ನು ಕಟ್ಟುವುದಕ್ಕೆ ಬೇಕಾದ ಮರದ ಸಾಮಾನುಗಳಿಗೆ ಇವೆಲ್ಲಕ್ಕೂ ಕೂಡ ಕಾಡಿನ ಸಂಪತ್ತು ಬೇಕಾಗುತ್ತದೆ. ಒಟ್ಟಿನಲ್ಲಿ ಕಾಡಿನ ಪ್ರಯೋಜನವನ್ನು ಇಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಮುಖ್ಯವಾಗಿ ಈ ಒಂದು ನವೀನ ಯುಗದಲ್ಲಿ ಎಲ್ಲರಿಗೂ ಬೇಕಾದಂಥ ಪೇಪರ್, ಪ್ಲಾಸ್ಟಿಕ್ ಇಂಕು, ಬೆಂಕಿ ಪೊಟ್ಟಣ ನೈಲಾನ್

ಬಟ್ಟೆಯನ್ನು ತಯಾರಿಸುವುದಕ್ಕೆ ಮತ್ತು ಕೈಗಾರಿಕೆಗೆ ಬೇಕಾದಂತಹ ರಿಕ್ವೈರ್‌ಮೆಂಟುಗಳಿಗೆ ಇದು ಬೇಕಾಗಿದೆ. ವನಸಂಪತ್ತನ್ನು ಬೆಳೆಸುವುದು ಮತ್ತು ಬಳಸುವುದು ಈ ಎರಡು ವಿಚಾರಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಇದರ ಬಗ್ಗೆ ಆಸಕ್ತಿವಹಿಸಿ ಕಾಡನ್ನು ಬೆಳೆಸುವುದು ಒಂದು ಕಡೆ ಅದನ್ನು ಉಪಯೋಗ ಮಾಡುವುದು ಒಂದು ಕಡೆ ಈ ಎರಡನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ವನ ಸಂಪತ್ತು ಇಲ್ಲದಿದ್ದರೆ ದೇಶದ ಐಶ್ವರ್ಯ ವೃದ್ಧಿಯಾಗುವುದಿಲ್ಲ. ಆದ್ದರಿಂದ ವನಸಂಪತ್ತನ್ನು ಬೆಳೆಸುವುದಕ್ಕೂ ಉಳಿಸುವುದಕ್ಕೂ ಆದ್ಯಗಮನ ಕೊಡಬೇಕು. ಪುರಾತನ ಕಾಲದಿಂದ ಧರ್ಮದಲ್ಲಿಯೂ ಕೂಡ ಮರಗಳನ್ನು ಬೆಳೆಸಬೇಕು, ಉಪಯೋಗಿಸಬೇಕು ಎಂದು ಇದೆ. ಕೆಲವು ಮರಗಳನ್ನು ಕಡಿಯಬಾರದು ಎಂದು ಶಾಸ್ತ್ರದಲ್ಲಿ ಮೂಢನಂಬಿಕೆಯೂ ಇದೆಯೆಂದು ಕಾಣುತ್ತದೆ. ಕಾಡನ್ನು ಬೆಳೆಸುವುದು ಸಂರಕ್ಷಣೆ ಮಾಡುವುದು, ಇದು ಸರ್ಕಾರದವರೊಬ್ಬರಿಂದಲೇ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರದವರು ಈ ಬಗ್ಗೆ ತಮ್ಮ ಪ್ರಯತ್ನವನ್ನು ಮಾಡುವುದರ ಜೊತೆಗೆ, ಹಣವನ್ನು ಒದಗಿಸುವುದರ ಜೊತೆಗೆ ಸಾರ್ವಜನಿಕರು ಸಹಕರಿಸದಿದ್ದರೆ ಸರ್ಕಾರ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಇದನ್ನು ಸುಧಾರಿಸುವುದಕ್ಕಾಗುವುದಿಲ್ಲ. ಆದ್ದರಿಂದ ಈ ಒಂದು ವಿಚಾರದಲ್ಲಿ ಮಾತ್ರ ಯಾವ ರಾಜಕೀಯವೂ ಇಲ್ಲ. ಬೇರೆ ಯಾವ ವಿಧವಾದ ಒಂದು ಗೊಂದಲವೂ ಇಲ್ಲ. ಇದು ಎಲ್ಲರೂ ಒಪ್ಪತಕ್ಕ ವಿಚಾರ. ಇದನ್ನು ಯಾವರೀತಿ ಕಾರ್ಯಗತ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಅನೇಕ ವರ್ಷಗಳಿಂದ ವನಮಹೋತ್ಸವವನ್ನು ಮಾಡುತ್ತಾರೆ. ಅದು ಫಲಕಾರಿಯಾಗಿ ಅದರಿಂದ ಎಷ್ಟು ಪ್ರತಿಫಲ ದೊರೆಯಬೇಕೋ ಅಷ್ಟು ದೊರೆಯದೇ ಇರುವುದು ಶೋಚನೀಯವಾದ ವಿಚಾರ. ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಯಾವರೀತಿ ಮಾಡಬೇಕು ಎನ್ನುವುದರ ಬಗ್ಗೆ ತಮ್ಮ ಸಲಹೆಗಳನ್ನು ಕೊಡಬೇಕು. ಇದರ ಬಗ್ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ನಿರೀಕ್ಷಿಸಿದಷ್ಟು ಪ್ರತಿಫಲ ಏತಕ್ಕೆ ದೊರೆಯುತ್ತಿಲ್ಲ ಎನ್ನುವ ಬಗ್ಗೆ ಯೋಚನೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ಪ್ರಕೃತಿಯ ವಸ್ತುಗಳು ಹಾಳಾದರೆ ಅವುಗಳನ್ನು ಕೂಡಲೇ ಬೆಳೆಸುವುದಕ್ಕಾಗುವುದಿಲ್ಲ. ಕೆಮಿಕಲ್ ಮೆಥೆಡ್ಸ್‌ನಿಂದ ಪ್ಲಾಸ್ಟಿಕ್ ಮುಂತಾದ ಅನೇಕ ವಸ್ತುಗಳನ್ನು ಕೂಡಲೇ ಸೃಷ್ಟಿ ಮಾಡಬಹುದು. ಆದರೆ ವೃಕ್ಷಗಳನ್ನು ನಾಳೆಯೇ ನೆಟ್ಟು ನಾಳೆಯೇ ಬೆಳೆಯುವುದಕ್ಕಾಗುವುದಿಲ್ಲ. ವೃಕ್ಷಗಳನ್ನು ಬೆಳೆಸಬೇಕಾದರೆ ಒಂದು ನಿಗದಿಯಾದ ಕಾಲ ಬೇಕು. ಆದ್ದರಿಂದ ಇದರ ಬಗ್ಗೆ ಎಚ್ಚರಿಕೆಯ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಕ. ಹೆಚ್ಚು ಕಾಡು ಇದ್ದರೆ ಮಳೆ ಬರುತ್ತದೆ. ಆದ್ದರಿಂದ ಕಾಡನ್ನು ಬೆಳೆಸಬೇಕು. ಮತ್ತು ಉಳಿಸಬೇಕು. ಕರ್ನಾಟಕ ರಾಜ್ಯದಲ್ಲಿ ಒಂದು ಕಡೆ ಮೈದಾನ ಇದೆ. ಮತ್ತೊಂದು ಕಡೆ ಮಲೆನಾಡು ಇದೆ. ಕಾಡು ಬೇಕು, ಕಾಡು ಇದ್ದರೆ ಮಳೆ ಬರುತ್ತದೆ ಎಂದು ಪ್ರತೀತಿ ಇದೆ ಅನೇಕ ಕಡೆ ಮಲೆನಾಡಿನಲ್ಲಿ ಇದ್ದಂತಹ ಕಾಡನ್ನು ಕಡಿದು ಮಲೆನಾಡು ಕೂಡ ಮೈದಾನವಾಗಿದೆ. ಆದ್ದರಿಂದ ಕಾಡನ್ನು ಕಡಿಯುವ ಬಗ್ಗೆ ಒಂದು ನಿಯಂತ್ರಣ ಇಲ್ಲದಿದ್ದರೆ ಖಂಡಿತವಾಗಿಯೂ ಕೂಡ ನಮ್ಮ ರಾಜ್ಯದ ಒಂದು ಸಂಪತ್ತನ್ನು ವೃದ್ಧಿ ಮಾಡುವುದಕ್ಕೆ ವನ ಸಂಪತ್ತನ್ನು ಉಳಿಸುವುದಕ್ಕೆ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ನಮ್ಮ ರಾಜ್ಯದ ವನಸಂಪತ್ತನ್ನು ವೃದ್ಧಿ ಪಡಿಸಿ ಉಳಿಸುವುದಕ್ಕೆ ಬೇಕಾದ ಎಲ್ಲಾ ಕಾರ್ಯಕ್ರಮವನ್ನೂ ತೆಗೆದುಕೊಳದಿದ್ದರೆ ನಮಗೆ ಪಾಪ ಬರುತ್ತದೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಸಾಕಷ್ಟು ತೀವ್ರ ಗಮನ ಕೊಡಬೇಕು. ಇಂಥಾ ಒಂದು ಕಾಯಿದೆ ಇದಕ್ಕೂ ಮೊದಲೇ ಬಂದಿದ್ದರೆ ಚೆನ್ನಾಗಿತ್ತು. ಈಗಲಾದರೂ ಇಂಥಾ ಒಂದು ಮಸೂದೆಯನ್ನು ಸರ್ಕಾರದವರು ನಮ್ಮ ಮುಂದೆ ಇಟ್ಟಿರತಕ್ಕದ್ದು ಸ್ತೋತ್ರಾರ್ಹವಾದದ್ದು. ಆದರೆ ಇದನ್ನು ಎಷ್ಟರಮಟ್ಟಿಗೆ ಸರ್ಕಾರದವರು ಕಾರ್ಯಗತ ಮಾಡುತ್ತಾರೆ ಇದರಿಂದ ಎಷ್ಟು ಪ್ರತಿಫಲ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ಆಕ್ಟ್ ಅನ್ನು ಪಾಸು ಮಾಡಿ ಬೆನ್ನು ತಟ್ಟಿಕೊಳ್ಳುವುದಕಾಗುವುದಿಲ್ಲ. ಇದರಿಂದ ಎಷ್ಟು ಪ್ರಯೋಜನವಾಯಿತು ಎಂಬುದನ್ನು ಯೋಚನೆ ಮಾಡಬೇಕು. ಅದಕ್ಕಾಗಿ ಒಂದು ಫೇಜ್ಡ್ ಪ್ರೋಗ್ರಾಮ್ ಹಾಕಿಕೊಂಡು ಅದರ ಪ್ರಕಾರ ನಡೆದುಕೊಂಡು ಒಂದು ವರ್ಷಕ್ಕೆ ಎಷ್ಟು ಸಸಿಗಳನ್ನು ಬೆಳೆಯುತ್ತಾರೆಯೋ ಆ ಸಸಿಗಳು ಉಳಿಯುವ ಹಾಗೆ ಮಾಡಬೇಕು. ವೃಕ್ಷ ಸಂಪತ್ತು ಉಳಿಯುವ ಹಾಗೆ ಮಾಡಬೇಕು. ಈ ರೀತಿಯಾಗಿ ಸಸಿಗಳನ್ನು ಬೆಳೆಸತಕ್ಕಂಥಾ ಒಂದು ಪ್ರಾಕ್ಟಿಕಲ್ ಯೋಜನೆಯನ್ನು ಹಾಕಿಕೊಳ್ಳದಿದ್ದರೆ ಅದನ್ನು ನಾವು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಅನೇಕ ಹಿಂದಿನ ಕಾಲದಿಂದ ಬಂದಿರತಕ್ಕ ಹಣದ ಮರಗಳಾದ ತೇಗು, ಹುಣಸೆ, ಮಾವು, ಹಲಸು, ಮುಂತಾದುವುಗಳನ್ನು ಕತ್ತರಿಸಿ ಹಾಕುತ್ತಿದ್ದಾರೆ ಇವುಗಳನ್ನು ಕಡಿದು ಸೌದೆಗಾಗಿ ಉಪಯೋಗಿಸುತ್ತಿದ್ದಾರೆ. ಇನ್ನು ಮುಂದೆ ಹುಣಸೇ ಹಣ್ಣಿಗೂ ಎಲ್ಲಿ

ಕ್ಷಾಮಬರುತ್ತದೋ ಏನೋ ಎನಿಸುತ್ತದೆ. ಅದಕ್ಕಾಗಿ ಹೆಚ್ಚಿನ ಪ್ರಯತ್ನವನ್ನು ಮಾಡಿ ಸಸಿಗಳನ್ನು ನೆಟ್ಟು ವೃಕ್ಷಗಳನ್ನು ಬೆಳೆಯುವ ಹಾಗೆ ಮಾಡಬೇಕು. ಕಮರ್ಷಿಯಲ್ ಸೈಡ್‌ನಲ್ಲಿ ಕೂಡ ಕರ್ನಾಟಕ ರಾಜ್ಯ ಅನೇಕ ರಾಜ್ಯಗಳಿಗಿಂತ ಒಂದು ಪ್ರಗತಿ ಪರವಾದ ರಾಜ್ಯವಾಗಿದೆ. ತೇಗ ಮತ್ತು ಹೊನ್ನೆ ಮರಗಳನ್ನು ಸಾಕಷ್ಟು ಬೆಳೆಸುತ್ತಿದ್ದಾರೆ. ತೇಗದ ಮರಗಳನ್ನು ಹೆಚ್ಚು ಹೆಚ್ಚು ಉಪಯೋಗಿಸುತ್ತಾರೆ ವಾರ್ ಟೈಮಿನಲ್ಲಿ ಅನೇಕ ಮರಗಳನ್ನು ಕಡಿದಿದ್ದಾರೆ. ತೇಗದ ಮರಗಳನ್ನು ಇವತ್ತು ಹುಟ್ಟು ಹಾಕಿದರೆ ೨೦-೨೫ ವರ್ಷ ಕಾಯಬೇಕಾಗುತ್ತದೆ. ತೇಗದ ಮರವಾಗಲಿ, ಹೊನ್ನೆ ಮರವಾಗಲಿ, ರೋಸ್‌ವುಡ್ ಆಗಲಿ ಎಲ್ಲವನ್ನೂ ಕೂಡ ಬೆಳೆಸುವುದಕ್ಕೆ ಯೋಚನೆ ಮಾಡಬೇಕು. ಜನಗಳಿಗೆ ಪ್ರಯೋಜನ ಆಗತಕ್ಕಂಥ, ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸತಕ್ಕಂಥ ಮತ್ತು ಹೆಚ್ಚು ನೆರಳು ಹಾಗೂ ಮಳೆ ಬರತಕ್ಕಂಥ ಮರಗಳನ್ನು ಬೆಳೆಸತಕ್ಕಂಥ ಯೋಜನೆಯನ್ನು ಇಟ್ಟುಕೊಳ್ಳಬೇಕು. ಇವತ್ತು ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮಾಡಿಕೊಂಡಿದ್ದೀರಿ, ಮತ್ತೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಇದೆ. ಈ ಅಂಗಗಳಿಗೆ ಒಂದು ಕೋ ಆರ್ಡಿನೇಷನ್ ಇರಬೇಕು

4-30 P. M.

ಎಲ್ಲಕ್ಕಿಂತ ಹೆಮ್ಮೆ ಪಡತಕ್ಕ ವಿಚಾರವೆಂದರೆ, ವಿಶಾಲ ಕರ್ನಾಟಕ ಆದಮೇಲೆ ಅತಿಮುಖ್ಯವಾದಂಥ ಅರಣ್ಯಗಳು ಇರತಕ್ಕಂಥ ಪ್ರದೇಶ ನಮ್ಮ ರಾಜ್ಯಕ್ಕೆ ಸೇರಿರತಕ್ಕಂಥಾದ್ದು ನಾವೆಲ್ಲರೂ ಹೆಮ್ಮೆ ಪಡತಕ್ಕ ವಿಚಾರ. ಎಷ್ಟರಮಟ್ಟಿಗೆ ಅರಣ್ಯ ಸಂಪತ್ತನ್ನು ಉಪಯೋಗಿಸಿಕೊಂಡು ನಮ್ಮ ರಾಜ್ಯ ಅಭಿವೃದ್ಧಿಯಾಗಿದೆ ಎಂದು ದೀರ್ಘವಾಗಿ ಆಲೋಚನೆ ಮಾಡತಕ್ಕದ್ದು ಈಗ ಅಗತ್ಯವಾಗಿದೆ. ಈಗ ತಂದಿರತಕ್ಕ ಮಸೂದೆಯಲ್ಲಿ ವನವನ್ನು ಉಳಿಸುವ ಪ್ರಯತ್ನದಲ್ಲಿ ಇರುವಾಗ, ಯಾರಾದರೂ ಸಕಾರಣವಿಲ್ಲದೆ ಮರಗಳನ್ನು ಕಡಿದರೆ ಅವರಿಗೆ ಸರಿಯಾದ ಶಿಕ್ಷೆ ಕೊಟ್ಟು ಡಿಟರೆಂಟ್ ಪನಿಷ್‌ಮೆಂಟ್ ಕೊಡತಕ್ಕಂಥಾದ್ದು ಮುಖ್ಯವಾದ ಉದ್ದೇಶವಾಗಿದೆ. ಇದರ ಜೊತೆಗೆ ವನವನ್ನು ಅಭಿವೃದ್ಧಿ ಮಾಡತಕ್ಕ ಬಗ್ಗೆ ಕಾಯಿದೆ ತಂದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಮರಗಳನ್ನು ಕಡಿಯುವುದನ್ನು ತಡೆಗಟ್ಟುವುದು ಒಂದು ಕಡೆ ಆದರೆ, ಅದನ್ನು ಅಭಿವೃದ್ಧಿ ಪಡಿಸುವುದರ ಬಗ್ಗೆ ಯೋಚನೆ ಮಾಡತಕ್ಕಂಥಾದ್ದು ಅತೀ ಅಗತ್ಯವಾದುದು. ರಾಷ್ಟ್ರದ ಅಭಿವೃದ್ಧಿಗೆ ಮುಖ್ಯವಾದಂಥ ವನಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ನಮ್ಮ ರಾಜ್ಯದ ಆರ್ಥಿಕ ಸಹಾಯದ ಜೊತೆಗೆ ಕೇಂದ್ರದಿಂದ ಸಹಾಯ ಪಡೆಯುವುದಕ್ಕೆ ಪ್ರಯತ್ನ ಪಡಬೇಕು. ಬೇರೆ ಮರಗಳಾದರೆ ಹುಟ್ಟು ಹಾಕಿದ ಒಂದು, ಒಂದೂವರೆ ವರ್ಷಕ್ಕೆ ಫಲ ಸಿಗುತ್ತದೆ. ಆದರೆ ಈ ತೇಗ ಮುಂತಾದ ಮರಗಳನ್ನು ಹಾಕುವುದರಿಂದ ಅನೇಕ ವರ್ಷಗಳು ಕಾಯಬೇಕಾಗುತ್ತದೆ ಇದಕ್ಕೆ ಡೆಡ್ ಇನ್‌ವೆಸ್ಟ್ ಮಾಡಿದಂತಾಗುತ್ತದೆ ಎಂದು ತಿಳಿದು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸುವುದಿಲ್ಲ. ಆದರೆ ನಾವು ಮುಂದಿನ ಪೀಳಿಗೆಯ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ನಾವು ಒಂದು ರಾಷ್ಟ್ರವನ್ನು ಕಟ್ಟುವಾಗ ಮುಂದಿನ ಪೀಳಿಗೆ ಬಗ್ಗೆ ಯೋಚನೆ ಮಾಡಬೇಕಾದರೆ ವನಸಂಪತ್ತನ್ನು ಬೆಳೆಸತಕ್ಕ ಬಗ್ಗೆ ಅತಿಮುಖ್ಯವಾದ ಗಮನವನ್ನು ಕೊಡುವುದು ಒಳ್ಳೆಯದು. ಇದರಲ್ಲಿರತಕ್ಕ ಒಂದು ವ್ಯತ್ಯಾಸವನ್ನು ಬದಿಗೊತ್ತಿ ಇದರ ಬಗ್ಗೆ ಸಾರ್ವಜನಿಕರು, ರಾಜಕಾರಿಣಿಗಳು ಮತ್ತು ಆರ್ಥಿಕ ವಿಚಾರದಲ್ಲಿ ಪರಿಣತಿಯನ್ನು ಪಡೆದಿರತಕ್ಕ ತಜ್ಞರು, ಹಾಗೂ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ಕೋ ಆರ್ಡಿನೇಷನ್ ಮಾಡಿಕೊಂಡು ಮರಗಳನ್ನು ಬೆಳೆಸಬೇಕಾಗುತ್ತದೆ. ಹಿಂದೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ರೋಡ್ ಮಾಡಿದರೆ ಆ ರೋಡಿನ ಅಕ್ಕ ಪಕ್ಕದಲ್ಲಿ ಮರಗಳನ್ನು ಬೆಳೆಸುತ್ತಿದ್ದರು. ಆಮೇಲೆ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೂ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೂ ತಿಕ್ಕಾಟ ಬಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಮರಗಳನ್ನು ಬೆಳೆಸಬೇಕೇ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ಬೆಳಸಬೇಕೇ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಂಥ ಪರಿಸ್ಥಿತಿ ಇದೆ. ಅದರ ಬಗ್ಗೆ ತಾವು ತೀವ್ರವಾದಂಥ ತೀರ್ಮಾನ ತೆಗೆದುಕೊಳ್ಳಬೇಕು. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು, ಫಾರೆಸ್ಟ್ ಡಿಪಾರ್ಟ್‌ನವರು ಮತ್ತು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ಈ ಮೂವರೂ ಸೇರಿ ಇದರ ಬಗ್ಗೆ ವ್ಯವಸ್ಥೆ ಮಾಡಬೇಕು. ಅಗ್ರಿಕಲ್ಚರಿಸ್ಟ್‌ಗೆ ಮತ್ತು ರೈತರಿಗೆ ಮರ ಬೆಳೆಸಿದರೆ ಒಂದು ಇನ್‌ಸೆಂಟೀವ್ ಕೊಡುವ ಹಾಗೆ ಮಾಡಿದರೂ ಒಳ್ಳೆಯದು ಎಂದು ಕಾಣಿಸುತ್ತದೆ. ತಮ್ಮ ಜಮೀನು ಪಕ್ಕದಲ್ಲಿ ಮರ ಬೆಳೆಸಿದರೆ ಇನ್‌ಸೆಂಟೀವ್ ಕೊಡುತ್ತೇವೆ ಎಂದೋ ಅಥವಾ ಆದರ ಫಲವನ್ನು ನೀವೇ ಅನುಭವಿಸಿ ಎಂದೋ ಮಾಡಿದರೆ ಒಳ್ಳೆಯದು ನನಗನ್ನಿಸುತ್ತದೆ. ಇದಕ್ಕೆ ಪ್ರೋತ್ಸಾಹವಾಗಿ ಸೀಡ್ಲಿಂಗ್ ಹಾಗೂ ನೀರಿನ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆ ಎಂದು ಹೇಳುವುದು ಒಳ್ಳೆಯದು

ಎಂದು ನನ್ನ ಅಭಿಪ್ರಾಯ. ತಮಗೆ ಗೊತ್ತಿರುವ ಹಾಗೆ ನಮ್ಮಲ್ಲಿ ಕೆಲವು ಫಾರೆಸ್ಟ್‌ಗಳಿವೆ. ಕರ್ಪೂರದ ಮರವನ್ನು ಬೆಳೆಸುತ್ತಾರೆ, ಬಿರ್ಲಾ ಅವರಿಗೆ ಬಹಳ ಕಡಿಮೆ ದರದಲ್ಲಿ ಕೊಡುತ್ತಾ ಇದ್ದಾರೆ. ಬೊಂಬನ್ನು ದಾಂಡೇಲಿಗೆ ಬಹಳ ಕಡಿಮೆ ದರದಲ್ಲಿ ಕೊಡುತ್ತಾ ಇದ್ದಾರೆ. ಅಂತಹ ತಪ್ಪನ್ನು ತಿರಿಗಿ ಮಾಡಬೇಡಿ. ಸಾಧ್ಯವಾದರೆ ಅವರಿಂದ ಹೆಚ್ಚಿಗೆ ಹಣ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಿ. ಈ ರೀತಿ ಮಾಡಿ ಮುಂದೆ ದೇಶವನ್ನು ಕಷ್ಟಕ್ಕೆ ಸಿಕ್ಕಿಸಬೇಡಿ. ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಗ್ರಾಹಕರ ಬಗ್ಗೆ ಹೇಳಬೇಕಾಗಿದೆ. ಸೌದೆಗೆ ದೊಡ್ಡ ಸಮಸ್ಯೆಯಾಗಿದೆ. ಕೆರೋಸಿನ್ ಬೆಲೆ ಒಂದಕ್ಕೆ ಮೂರರಷ್ಟಾಗಿದೆ. ಒಂದೊಂದು ಸಲ ಗ್ಯಾಸ್ ಸರಿಯಾಗಿ ಸಿಕ್ಕುವುದಿಲ್ಲ. ಸೌದೆಗೆ ಅಭಾವ ಇದೆ ಅನೇಕ ಹಳ್ಳಿಗಳಲ್ಲೂ ಸೌದೆಗೆ ಅಭಾವವಿದೆ ಜನಗಳು ಸೌದೆ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಜನಗಳು ಗ್ಯಾಸ್, ಎಲೆಕ್ಟ್ರಿಸಿಟಿ ಉಪಯೋಗಿಸುತ್ತಾರೆ ಗ್ರಾಮಾಂತರ ಪ್ರದೇಶಗಳಲ್ಲಿ ಸೌದೆಗೆ ಬಹಳ ಅವ್ಯವಸ್ಥೆಯಾಗಿರುವುದರಿಂದ, ಇದರ ಬಗ್ಗೆ ಯೋಚನೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

Statement of Objects and Reasons ನಲ್ಲಿ "Industrialisation and pressure of population have resulted in heavy destruction of tree growth in urban areas" ಎಂದು ಹೇಳುತ್ತಾರೆ. ಅರ್ಬನ್ ಏರಿಯಾ ಬಗ್ಗೆ ಎಷ್ಟು ಆದ್ಯತೆಯನ್ನು ಕೊಟ್ಟಿದ್ದೀರೋ ಅಷ್ಟೇ ಆದ್ಯತೆಯನ್ನು ರೂರಲ್ ಏರಿಯಾಗೂ ಕೊಡಿ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. Statement of Objects and Reasons ನಲ್ಲಿ "Trees which provide shade, mitigate the extremes of climate, render aesthetic beauty, purify the polluted atmosphere, mute the noise, have been one of the first casualties of pressure on space in our Cities and Towns." ಎಂದು ಲಿಮಿಂಟೆಡ್ ಆಗಿ ಹೇಳಿದೆ. ಆದುದರಿಂದ ಪಟ್ಟಣಗಳಿಗೆ ಎಷ್ಟು ಆದ್ಯತೆಯನ್ನು ಕೊಟ್ಟಿದ್ದೀರೋ ಅಷ್ಟೇ ಆದ್ಯತೆಯನ್ನು ಹೊರಗಡೆಯೂ ಕೊಡಿ ಎಂದು ಒತ್ತಾಯಪೂರ್ವಕವಾಗಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡು ಏರಿಯಾ ಬಗ್ಗೆ ಆ ಕಡೆಯಿಂದ ಬಂದಂಥ ಸದಸ್ಯರು ಮಾತನಾಡುತ್ತಾರೆ. ಆದರೂ ನಮ್ಮ ನೆಂಟರ ಮನೆ ಅಲ್ಲಿ ಜಾಸ್ತಿ ಇರುವುದರಿಂದ ಅಲ್ಲಿ ನಾನು ನೋಡಿರುವುದರಿಂದ ಅದರ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ನನ್ನ ೫ ಜನ ಅಕ್ಕಂದಿರ ಪೈಕಿ ೩ ಜನರು ಮಲೆನಾಡಿನಲ್ಲಿದ್ದಾರೆ. ನಾನು ಸಣ್ಣ ಹುಡುಗನಾಗಿದ್ದಾಗ ಅಲ್ಲಿ ನೋಡಿದ್ದೆ, ದಟ್ಟವಾದ ಕಾಡು ಇತ್ತು. ಮತ್ತು ಅಲ್ಲಿ ಭಯಂಕರ ಪರಿಸ್ಥಿತಿ ಕಾಣುತ್ತಿತ್ತು. ಈಗ ಎಲ್ಲಿ ನೋಡಿದರೂ ಕಾಡನ್ನು ಕಡಿದು ಬಟ್ಟ ಬಯಲಾಗಿದೆ. ಆದುದರಿಂದ ಮಲೆನಾಡನ್ನು ಹಿಂದೆ ಇದ್ದ ಮಲೆನಾಡನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿ. ಈಗ ಈಸ್ಟ್ರನ್ ಡಿಸ್ಟ್ರಿಕ್ಟ್‌ನಲ್ಲಿ ಮಳೆ ಬರುವುದಕ್ಕೆ ಸಾಕಾದಷ್ಟು ಅವಕಾಶವಿಲ್ಲ ಎಂದು ಹೇಳಿದ್ದೀರಿ. ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ಸಾರಿ ನಾವು ಕಷ್ಟಕ್ಕೆ ಸಿಕ್ಕಿಕೊಂಡಿರತಕ್ಕ ವರ್ಷ ಇದು. ಅನೇಕ ಭಾಗಗಳಲ್ಲಿ ಮಳೆ ಬಾರದೇ ಇರತಕ್ಕಂಥಾದ್ದು ಬಹಳ ವ್ಯಾಕುಲವನ್ನುಂಟುಮಾಡಿದೆ. ಆದುದರಿಂದ ಇವತ್ತು ಪ್ರತಿಫಲ ಸಿಕ್ಕದೇ ಹೋದರೂ ಬೇಗ ಪ್ರತಿಫಲ ದೊರೆಯುವ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ತಾವು ಈ ಬಿಲ್‌ನಲ್ಲಿ ಕೊಟ್ಟಿರತಕ್ಕ ನಿಯಮಗಳ ಪ್ರಕಾರ ಮೊದಲನೆಯದಾಗಿ, ಟ್ರೀ ಅಥಾರಿಟಿ ಕಾನ್‌ಸ್ಟಿಟ್ಯೂಟ್ ಮಾಡಬೇಕು ಎಂದು ಹೇಳಿದ್ದೀರಿ, ಇದರಲ್ಲಿ "The State Government shall, by notification, constitute a Tree Authority for each urban area and each rural area" ಎಂದು ಹೇಳಿದ್ದೀರಿ. ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ರೂರಲ್ ಏರಿಯಾ ಎಂದು ಹಾಕಿರಲಿಲ್ಲ. ಆದರೆ ಇದರಲ್ಲಿ ಹಾಕಿದ್ದೀರಿ. ಎಸ್ಟಾಬ್ಲಿಷ್‌ಮೆಂಟ್ ಅಗ್ರಿಕಲ್ಚರ್ ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಪ್ರತಿನಿಧಿಗಳನ್ನು ಸೇರಿಸಿದ್ದೀರಿ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಿಂದ ಒಬ್ಬ ಪ್ರತಿನಿಧಿಯನ್ನು ಹಾಕುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ. ಮತ್ತು ರೂರಲ್ ಏರಿಯಾನಲ್ಲಿ ಸ್ಪೆಷಲ್ ಡೆಪ್ಯೂಟಿ ಕಮಿಷನರ್, ಸೂಪರಿಂಟೆಂಡಿಂಗ್ ಇಂಜನಿಯರ್, ಇಬ್ಬರು ನಾನ್ ಅಫಿಷಿಯಲ್ ಮೆಂಬರ್ಸ್ ಎಂದು ಕೊಟ್ಟಿದೆ. ಇದನ್ನು ಕಾನ್‌ಸ್ಟಿಟ್ಯೂಟ್ ಮಾಡುವಾಗ

ಫಾರೆಸ್ಟ್ ಬಗ್ಗೆ ಆಸಕ್ತಿ, ತಿಳುವಳಿಕೆ ಇರತಕ್ಕವರನ್ನು ಹಾಕಿ ಎಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ಇದಕ್ಕೆ ಸಂಬಂಧಪಟ್ಟ ಹಾಗೆ ಮೂರು ಜನ ಆಫೀಸರ್ಸ್ ಎಂದು ಇದೆ. ಈ ಆಫೀಸರ್ಸ್ ಬರೀ ಸೂಪರ್‌ವಿಷನ್ ಅಧಿಕಾರಿ ಕೊಡುವುದರಜೊತೆಗೆ ಕನ್‌ಸರ್ವೇಷನ್ ಅಧಿಕಾರ ಕೊಟ್ಟರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಏಕೆಂದರೆ ಬರೀ ಕಡಿಯುವುದನ್ನೇ ಮಾಡಿಕೊಂಡು ಹೊರಟರೆ ಸರಿ ಎಂದು ಕಾಣುವುದಿಲ್ಲ. ಆದ್ದರಿಂದ ಪ್ರಿಜರ್‌ವೇಷನ್ ಮತ್ತು ಪ್ರೊಟೆಕ್ಷನ್ ಎರಡನ್ನೂ ಸೇರಿಸಿದರೆ ಬಹಳ ಒಳ್ಳೆಯದು ಎಂಬುದಾಗಿ ನನಗನ್ನಿಸುತ್ತದೆ. ದಯವಿಟ್ಟು ಅದರ ಬಗ್ಗೆಯೂ ಯೋಚನೆ ಮಾಡಬೇಕು ಡ್ಯೂಟೀಸ್ ಆಫ್ ಟ್ರೀಸ್ ಅತಾರಿಟೀಸ್ ಬಗ್ಗೆ ಸಾಕಷ್ಟು ರೂಲ್ಸ್‌ಗಳನ್ನು ಫ್ರೇಂ ಮಾಡಬೇಕು. ಇದರ ಬಗ್ಗೆ ಪ್ರಾಕ್ಟಿಕಲ್ಲಾಗಿ ಏನೇನು ಮಾಡಬೇಕೆಂಬುದನ್ನು ವಿಚಾರ ಮಾಡಬೇಕು. ಈ ಮಸೂದೆಯ ಮುಖ್ಯೋದ್ದೇಶವನ್ನು ೫ನೇ ಅಧ್ಯಾಯದಲ್ಲಿ ಹೇಳಿದ್ದಾರೆ. ಅದು ಈ ರೀತಿ ಇದೆ :

> "8. **Restriction of felling of Trees:** With effect on and from the appointed day, notwithstanding any custom, usage, contract, or law for the time being in force, no person shall fell any tree or cause any tree to be felled in any land, whether in his ownership or occupancy or otherwise, except with the previous permission of the Tree Officer."

ಇಲ್ಲಿ ಕೊಟ್ಟಿರುವ ಹಾಗೆ ಟ್ರಿ ಪ್ರೊಟೆಕ್ಷನ್ ಮಾಡಬೇಕೆನ್ನುವುದು ಸರಿ. ಆದರೆ ಹೆಚ್ಚು ಭಾಗ ಖಾಸಗಿಯವರು ಮರಗಳನ್ನು ಕಡಿಯುತ್ತಿದ್ದರೂ ಮತ್ತು ಕಳ್ಳತನದಲ್ಲಿ ಸಾಗಾಣಿಕೆ ಮಾಡುತ್ತಿದ್ದರೂ ಮತ್ತು ಕಳ್ಳತನದಲ್ಲಿ ಮರಗಳನ್ನು ಕತ್ತರಿಸಿ ಹೆಚ್ಚಿಗೆ ದೇಶಕ್ಕೆ ಅರಣ್ಯ ಸಂಪತ್ತನ್ನು ನಾಶಮಾಡುತ್ತಿದ್ದರೂ ಅದಕ್ಕೆ ತಕ್ಕ ಕ್ರಮಗಳನ್ನು ತೆಗೆದು ಕೊಳ್ಳುತ್ತಿಲ್ಲ. ಇದರಿಂದ ದೇಶಕ್ಕೆ ಹೆಚ್ಚಿಗೆ ನಷ್ಟವಾಗುತ್ತಿದೆ. ಇದರ ಕಡೆಗೆ ಸರ್ಕಾರ ಲಕ್ಷ್ಯ ಕೊಡದಿದ್ದರೆ ಲೋಪವಾಡಿದಂತಾಗುತ್ತದೆ ಇಂತಹ ಸಂದರ್ಭಗಳಲ್ಲಿ ಖಾಸಗಿಯವರಿಗೆ ಪರ್ಮಿಷನ್ ಸಹ ಕೊಡುತ್ತಾರೆ. ಆದ್ದರಿಂದ ಅರಣ್ಯಗಳಲ್ಲಿ ಯಾವರೀತಿಯಿಂದಾದರೂ ಖಾಸಗೀಯವರು ಮರಗಳನ್ನು ಕಡಿಯುವುದನ್ನು ಕೂಡಲೇ ತಡೆಗಟ್ಟಬೇಕು. ಇದರ ಬಗ್ಗೆ ಸೂಕ್ತ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಅರಣ್ಯ ಸಂಪತ್ತನ್ನು ರಕ್ಷಣೆ ಮಾಡಬೇಕೆಂದು ಒಂದು ಕಡೆ ಹೇಳುವುದು, ಮತ್ತೊಂದು ಕಡೆ ಅರಣ್ಯದಲ್ಲಿ ಬೆಳೆಯುವ ಮರಗಳನ್ನು ಕತ್ತರಿಸುವುದಕ್ಕೆ ಅಪ್ಪಣೆ ಕೊಡುತ್ತಿದ್ದಾರೆ. ಇದು ಸರಿಯಲ್ಲ. ಆದ್ದರಿಂದ ಈ ಯಾವ್ಯಾವ ಮರಗಳನ್ನು ಕಡಿಯಬೇಕು, ಯಾವ್ಯಾವ ಮರಗಳನ್ನು ಕಡಿಯಬಾರದು ಎಂಬ ಬಗ್ಗೆ ನಿಷೇಧವನ್ನು ಹಾಕುವುದು ಈಗಿನ ಒಂದು ಸನ್ನಿವೇಶದಲ್ಲಿ ಅತ್ಯಾವಶ್ಯಕವಾದುದು.

ಐದನೆಯ ಅಧ್ಯಾಯದ ೯ನೇ ಸೆಕ್ಷನ್ನಿನಲ್ಲಿ ಈ ರೀತಿಯಾಗಿ ಹೇಳಿದೆ.

> "9. **Planting of adequate number of Trees:** Every owner or occupant of a land shall, within a period of five years from the appointed day or within such extended period as the Tree Authority may specify, plant trees so as to conform to the standards prescribed by the said Tree Authority:

ಇದರ ಬಗ್ಗೆ ಸರ್ಕಾರದವರು ತುಂಬಾ ಮುತುವರ್ಜಿ ವಹಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಅರಣ್ಯ ಸಂಪತ್ತನ್ನು ಹೆಚ್ಚಿಗೆ ಮಾಡಿ ಅದರಿಂದ ಉಪಯೋಗ ಜನರಿಗೆ ನಿಜವಾಗಿ ದೊರೆಯಬೇಕಾದರೆ, ಅದರಲ್ಲಿ ಅಡಗಿರುವ ತತ್ವದ ಕಡೆಗೆ ಸರ್ಕಾರ ಗಮನವನ್ನು ಹರಿಸಬೇಕು. ಅದರ ಕಡೆಗೆ ವಿಚಾರ ಮಾಡಬೇಕು. ಅದೇ ರೀತಿಯಾಗಿ ಸೆಕ್ಷನ್ ೧೧ರಲ್ಲಿ ಹೇಳಿರುವ ಹಾಗೆ ಒಂದು ಮರವನ್ನು ಕಡಿದರೆ ಎರಡು ಮರಗಳನ್ನು ನೆಡಬೇಕೆಂದು ಹೇಳಿರುವ ಬಗ್ಗೆ ಹೆಚ್ಚಿನ ಗಮನವನ್ನು ತೆಗೆದುಕೊಳ್ಳಬೇಕು. ಇದು ಬಹಳ ಮುಖ್ಯವಾದುದು. ಏಕೆಂದರೆ ಮರಗಳನ್ನು ಕಡಿಯುವುದು ಸುಲಭ. ಆದರೆ ಮರಗಳನ್ನು ನೆಡಿಸುವುದು ಬಹಳ ಕಷ್ಟ. ಅದನ್ನು ಚೆನ್ನಾಗಿ ಬೆಳೆಯುವಂತೆ ಫಾಲೊ ಅಪ್ ಕಾರ್ಯ ಮಾಡುವುದು

ಬಹಳ ಮುಖ್ಯ. ಯಾರೇ ಆಗಲಿ ಮರಗಳನ್ನು ಕಡಿಯುವುದಕ್ಕೆ ಬಹಳ ಸುಲಭವಾಗಿ ಪರ್ಮಿಷನ್ ತೆಗೆದುಕೊಳ್ಳುತ್ತಾರೆ. ಆದರೆ ಅವನ್ನು ಬೆಳೆಸುವುದಕ್ಕೆ ಅಷ್ಟೊಂದು ಆಸಕ್ತಿ ಇರುವುದೇ ಇಲ್ಲ ಅದು ಹೋಗಿಬಿಡುತ್ತದೆ. ಅಂತಹ ಜನಗಳ ಬಗ್ಗೆ ಒಂದು ರಿಸ್ಟ್ರಿಕ್ಷನ್ ಹಾಕಬೇಕು. ಆ ರೀತಿಯಾಗಿ ಅಂತಹವರು ಬೆಳಸದೇ ಹೋದರೆ ಅಂತಹವರಿಗೆ ಪೆನಾಲ್ಟಿ ಹಾಕುವುದಕ್ಕೆ ಸೂಕ್ತವಾದ ಒಂದು ಕ್ಲಾಜನ್ನು ಇದರಲ್ಲಿ ಸೇರಿಸಬೇಕು

ಇನ್ನು ಕ್ಲಾಜ್ ೧೨. ಅಡಾಪ್‌ಷನ್ ಆಫ್ ಟ್ರೀಸ್ ವಿಷಯದಲ್ಲಿ ಹೇಳಬೇಕಾದರೆ ನಮ್ಮ ಬೆಂಗಳೂರು ನಗರದಲ್ಲಿ ಮಾತ್ರ ಅದರ ಅವಶ್ಯಕತೆ ಬಹಳ ಹೆಚ್ಚಾಗಿದೆಯೆಂದು ಈಗಾಗಲೇ ಬೆಂಗಳೂರು ಕಾರ್ಪೊರೇಷನ್ನಿನವರು ಕೆಲವಾರು ಪಾರ್ಕ್‌ಗಳಲ್ಲಿ ಅನೇಕ ಗಿಡಗಳನ್ನು ನೆಡುತ್ತಾ ಇದ್ದಾರೆ. ಅನೇಕ ದೊಡ್ಡ ದೊಡ್ಡ ರಸ್ತೆಗಳ ಪಕ್ಕದಲ್ಲಿ, ದೊಡ್ಡ ದೊಡ್ಡ ಮನೆಗಳ ಹತ್ತಿರ ವಿಶೇಷ ಸ್ಥಳವಿದ್ದು ಖಾಸಗೀ ಯವರು ಉದ್ಯಾನವನಗಳನ್ನು ಮಾಡಿಕೊಂಡಿದ್ದರೆ, ಮತ್ತು ದೊಡ್ಡ ದೊಡ್ಡ ಕಾರ್ಖಾನೆಗಳ ಹತ್ತಿರ ಒಳ್ಳೊಳ್ಳೆಯ ಗಿಡಮರಗಳನ್ನು ಬೆಳೆಸುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದಾರೆ ಆದರೆ ಅವುಗಳ ರಕ್ಷಣೆಯನ್ನು ನೋಡಿಕೊಳ್ಳಬೇಕಾದುದು ಬಹು ಮುಖ್ಯವಾದುದು. ಅದರ ಬಗ್ಗೆ ಕಾರ್ಪೊರೇಷನ್ನಿನವರು ಸಾರ್ವಜನಿಕರ ಜೊತೆಯಲ್ಲಿ ಸಂಪರ್ಕವನ್ನೂ ಸಹ ಇಟ್ಟುಕೊಂಡಿದ್ದಾರೆ. ಹಾಗೆ ಆ ಗಿಡಗಳನ್ನು ಚೆನ್ನಾಗಿ ಹೆಚ್ಚಿಗೆ ಬೆಳೆಸಬೇಕು. ಮನೆಯ ಮುಂದೆ ಗಿಡಗಳನ್ನು ಬೆಳೆಸಬೇಕು ಎಂಬ ಬಗ್ಗೆ ಕಡ್ಡಾಯವಾದ ಕಾನೂನುಗಳನ್ನು ಮಾಡಬೇಕು. ಆ ರೀತಿ ಮಾಡಿದರೆ ಅವನ್ನು ಚೆನ್ನಾಗಿ ನೋಡಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆ. ಅದೊಂದು ಅವರ ಡ್ಯೂಟಿ ಎಂಬುದಾಗಿ ಇದರಲ್ಲಿ ಸೇರಿಸಬೇಕು.

ಇನ್ನು ಕ್ಲಾಜ್ ೧೩. ಯಾರ್ಯಾರು ಮರಗಳನ್ನು ನೆಡುತ್ತಾರೋ ಅಂತಹವರು ಅಪ್ಪಣೆ ಪಡೆದೂ ಸಹ ಆ ಅಪ್ಪಣೆ ಪ್ರಕಾರ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಅಂತಹವರಿಂದ ಅದಕ್ಕಾದ ಖರ್ಚನ್ನು ರಿಕವರ್ ಮಾಡಬೇಕೆಂದು ಹೇಳುವ ಕಾರ್ಯವನ್ನು ತ್ವರಿತಗೊಳಿಸಬೇಕು. ಅದರ ಬಗ್ಗೆ ಸರ್ಕಾರದವರು ಫಾಲೊ ಅಪ್ ಮಾಡಬೇಕು.

ಇನ್ನು ಪೆನಾಲ್ಟೀಸ್ ಬೇಕಾದಷ್ಟಿವೆ. ಈ ವಿಚಾರದಲ್ಲಿ ನಾನು ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಇಷ್ಟೊಂದು ಪೆನಾಲ್ಟೀಸ್ ಇದ್ದರೂ ದುಡ್ಡು ಒಂದು ಕೊಟ್ಟರೆ ಎಂತಹ ಪೆನಾಲ್ಟಿ ಅಥವಾ ಶಿಕ್ಷೆಯನ್ನೂ ಸಹ ತಪ್ಪಿಸಬಹುದು ಎಂತಹ ಕೆಲಸವನ್ನಾದರೂ ಮಾಡಬಹುದು. ತಮ್ಮ ಕಾಲದಲ್ಲಿ ಯಂತೂ ದುಡ್ಡಿಗೆ ಬಲಿಯಾಗಿಯೋ ಅಥವಾ ಪ್ರಭಾವಕ್ಕೆ ಬಲಿಯಾಗಿಯೋ ಯಾವ ಕಾರ್ಯವನ್ನೂ ಮಾಡಬಾರದು. ಅದು ಸರಿಯಲ್ಲ. ಅದನ್ನು ಕೂಡಲೇ ತಪ್ಪಿಸಬೇಕು.

ಇನ್ನು ೨೦ನೇ ಕ್ಲಾಜಿನಲ್ಲಿ ಹೇಳಿರುವ ಪ್ರಕಾರ ಬರೀ ಪ್ರಾಸಿಕ್ಯೂಷನ್ಸ್ ಏನೇನು ಸಾಲದು. ಇನ್ನೂ ಇತರ ಹೈಯರ್ ಪನಿಷ್‌ಮೆಂಟ್ ಅಥವಾ ಪೆನಲ್ಟಿ ಇದ್ದರೂ ಮಿಸಾ ಮೇಲೆ ಅರೆಸ್ಟ್ ಮಾಡುವಂತೆ ಇಲ್ಲಿಯೂ ಮಿಸಾ ಕಾನೂನನ್ನು ಹಾಕಿದರೆ ಬಹಳ ಒಳ್ಳೆಯದು. ಏಕೆಂದರೆ ಬೇರೆ ಕಾನೂನುಗಳಲ್ಲಿ ಸುಲಭವಾಗಿ ತಪ್ಪಿಸಿಕೊಳ್ಳಬಹುದು. ಆದ್ದರಿಂದ ಮಿಸಾ ಕಾನೂನನ್ನು ಇಲ್ಲಿಯೂ ಅಳವಡಿಸಬೇಕೆಂದು ಹೇಳಿ ನಾನೂ ಇದಕ್ಕೆ ಪೂರ್ಣ ಬೆಂಬಲ ಕೊಡುತ್ತೇನೆ.

ಇನ್ನು ಕ್ಲಾಜ್ ೨೧. ಇದರಲ್ಲಿಯೂ ಸರ್ಕಾರದವರು ಯಾವ ಒಂದು ಪ್ರಭಾವಕ್ಕೂ ಒಳಗಾಗ ಬಾರದು. ಈಲ್ಡ್ ಆಗುವುದನ್ನೂ ಸಹ ತಪ್ಪಿಸಬೇಕು. ರೂಲ್ಸ್‌ನಲ್ಲಿ ಸಾಕಷ್ಟು ವಿವರವಾಗಿ ಕೊಡಬೇಕಾಗಿತ್ತು.

ಅಧ್ಯಾಯ ೭ರಲ್ಲಿ ಮಿಸಲೇನಿಯಸ್ ರೂಲ್ಸ್ ಎಂಬುದಾಗಿ ಹೇಳಿದೆ. ಒಟ್ಟಿನಲ್ಲಿ ಇಷ್ಟೆ ಎಲ್ಲ ಪುರಾಣ ಮತ್ತು ಪ್ರವಚನ ಮಾಡುವುದಕ್ಕೆ ಬದಲಾಗಿ ಎಷ್ಟರಮಟ್ಟಿಗೆ ಇದರಿಂದ ಪ್ರತಿಫಲ ದೊರಕಿದೆಯೆಂಬುದನ್ನು ವಿಚಾರ ಮಾಡಬೇಕು. ಇದರ ಬಗ್ಗೆ ನಮ್ಮ ಆಸಕ್ತಿಯೂ ಸಹ ಚೆನ್ನಾಗಿರಬೇಕು. ಈ ಕಾನೂನು ಬಂದು ಈಗಾಗಲೇ ಕೆಲವಾರು ತಿಂಗಳುಗಳಾಗಿರಬೇಕು. ಇನ್ನು ಆಕ್ಟ್ ಜಾರಿಗೆ ಬಂದಮೇಲೆ ಒಂದು ವರ್ಷದಲ್ಲಿ ಯಾವ್ಯಾವ ರೀತಿಯಲ್ಲಿ ಪ್ರೋಗ್ರಾಂ ಇಟ್ಟುಕೊಂಡಿದ್ದಾರೆ, ಎಷ್ಟೆಷ್ಟು ಖರ್ಚಾಗಿದೆ, ಎಷ್ಟೆಷ್ಟು ಪ್ರತಿಫಲ ಬಂದಿದೆ, ಯಾವ್ಯಾವ ರೀತಿಯಲ್ಲಿ ಬೆಳವಣಿಗೆಯಾಗಿದೆಯೆಂಬುದನ್ನು ನೋಡಬೇಕು. ಆದ್ದರಿಂದ ಬರೀ ಪುಸ್ತಕ ಅಂಕಿ ಅಂಶಗಳು ಬೇಡ. ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಸಹಿಯಾದ ಆಕ್ಟ್ ಇದರ ಬಗ್ಗೆ ಬಂದರೆ ದೇಶಕ್ಕೆ ಪ್ರಯೋಜನವಾಗುತ್ತದೆ. ನವಯುಗ ಬರುತ್ತದೆ, ವನಸಂಪತ್ತೂ ಸಹ ಈ ರಾಜ್ಯದಲ್ಲಿ ಸುರಕ್ಷಿತವಾಗಿ ಉಳಿಯುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ ನನ ಮಾತನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು) :—ಸನ್ಮಾನ್ಯ ಅಧ್ಯಕ್ಷರೇ. ಮಾನ್ಯ ಅರಣ್ಯ ಮಂತ್ರಿಗಳು ನಮ್ಮ ಸದನದ ಮುಂದೆ ತಂದಿರತಕ್ಕ ಸಸ್ಯ ಸಂರಕ್ಷಣೆಯ ತಿದ್ದುಪಡಿ ಮಸೂದೆಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಮಸೂದೆ ಇನ್ನೂ ಬಹಳ ಹಿಂದೆಯೇ ಬರಬೇಕಾಗಿತ್ತು. ಆದರೆ ಇಂದಾದರೂ ನಮ್ಮ ಅರಣ್ಯ ಮಂತ್ರಿಗಳು ಈ ಒಂದು ತಿದು ಪಡಿ ಮಸೂದೆಯನ್ನು ತಂದು ಬಹಳ ಪುಣ್ಯಕರವಾದ ಕೆಲಸಗಳನ್ನು ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಹಿಂದೆ ಇದ್ದಂಥ ಮಂತ್ರಿಗಳು ಈ ಒಂದು ವಿಚಾರದಲ್ಲಿ ತಪ್ಪು ಮಾಡಿದ್ದರೆ ಅದರ ಒಂದು ಪಾಪಕ್ಕೆ ಅವರು ಗುರಿಯಾಗುತ್ತಾರೆ. ಆದರೆ ಈಗ ತಾವಾದರೂ ಸ್ವಲ್ಪಮಟ್ಟಿಗೆ ಪುಣ್ಯ ಕಟ್ಟಿಕೊಳ್ಳುತ್ತೀರಿ ಎಂಬುದಾಗಿ ನನ್ನ ಭಾವನೆ. ಈ ಸಂದರ್ಭದಲ್ಲಿ ನನ್ನ ಒಂದು ಮಾತು ಏನೆಂದರೆ. ನಮ್ಮ ನಗರ ಇಷ್ಟು ವಿಶಾಲವಾಗಿ ಬೆಳೆಯುತ್ತಿರುವಾಗ ಅದರಲ್ಲಿಯೂ ನಮ್ಮ ದೇಶದ ಜನಸಂಖ್ಯೆ ವಿಪರೀತವಾಗಿ ಬೆಳೆಯುತ್ತಿರುವಾಗ ನಮ್ಮ ದೇಶಕ್ಕೆ ಬೇಕಾದಷ್ಟು ಅರಣ್ಯ ಸಂಪತ್ತಿನ ಅವಶ್ಯಕತೆ ಹೆಚ್ಚಾಗುವುದಕ್ಕೆ ಬದಲು ಹೆಚ್ಚಿಗೆ ನಾಶವಾಗುತ್ತಿದೆಯೆಂದು ಹೇಳಲು ನಾನು ವಿಷಾದಪಡುತ್ತೇನೆ. ಒಟ್ಟಿನಲ್ಲಿ ಅನೇಕ ಮರಗಳು ಇತ್ತೀಚೆಗೆ ಬಹಳವಾಗಿ ನಾಶವಾಗುತ್ತಿವೆ. ನಗರ ಪ್ರದೇಶದಲ್ಲಿ ಮರಗಳನ್ನು ಬೆಳೆಸುವ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕು. ಇದುವರೆಗೆ ಅರಣ್ಯ ಸಂಪತ್ತು ನಾಶವಾಗುವುದಕ್ಕೆ ಎಡೆ ಕೊಟ್ಟರೇ ವಿನಹ ಮತ್ತೇನೂ ಇಲ್ಲ. ಇಂತಹ ಒಂದು ತಿದ್ದುಪಡಿ ಮಸೂದೆಗೆ ಆದರಿಂದ ಬಹಳವಾಗಿ ದ್ರೋಹ ಮಾಡಿದಂತಾಗುತ್ತಿದೆ. ಇವತ್ತು ಕೈಗಾರಿಕೆಗಳಿಂದ ಉದ್ಭವಿಸುವಂತಹ ಒಂದು ಕಲುಷಿತವಾದ ವಾತಾವರಣ, ಒಂದು ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದಕ್ಕೆ ನಾವು ಸಾಕಷ್ಟು ಮರಗಳನ್ನು ಬೆಳೆಸುವುದಕ್ಕೆ ಹೆಚ್ಚಿನ ಗಮನ ಕೊಡಬೇಕಾದುದು ನಮ್ಮ ಕರ್ತವ್ಯವೆಂದು ನಾವೆಲ್ಲರೂ ಮನಗಾಣುವ ಕಾಲ ಈಗ ಬಂದಿದೆ.

ಇಷ್ಟು ಮಾತ್ರವೇ ಅಲ್ಲ ನಾನು ಮಲೆನಾಡು ಪ್ರದೇಶದಿಂದ ಬಂದಂತಹ ವ್ಯಕ್ತಿ. ೧೦ ವರ್ಷಗಳಿಂದೀಚೆಗೆ ನಾಶವಾಗಿರುವ ಮರಗಳ ಸಂಖ್ಯೆಯನ್ನು ನೋಡುವುದಾದರೆ ಇಂತಹ ದೊಡ್ಡ ದ್ರೋಹ ಬೇರೆಯಾವುದು ಇಲ್ಲವೆಂದು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮರಗಳು ನಾಶವಾಗಿವೆ ಜೊತೆಗೆ ಆ ಮರಗಳು ನಮ್ಮ ರಾಜ್ಯದಲ್ಲೇ ಉಪಯೋಗವಾಗದೆ ನಮ್ಮ ಗಡಿಯಿಂದಾಚೆಗೆ ಹೋಗಿರುವುದು ತಮ್ಮ ಗಮನಕ್ಕೂ ಕೂಡ ಬಂದಿದ್ದರೂ ಇಲ್ಲಿಯವರೆಗೆ ಸಾಕಷ್ಟು ಕಾರ್ಯೋನ್ಮುಖರಾಗಿಲ್ಲವೆಂದು ಹೇಳುತ್ತೇನೆ. ಇನ್ನು ಮುಂದಾದರೂ ನೀವು ಇದನ್ನು ಗಮನಿಸಬೇಕಾಗುತ್ತದೆ. ಈ ಮಸೂದೆಯನ್ನು ತಂದದ್ದು ಸರಿ ಅದನ್ನು ಸರಿಯಾದ ರೀತಿಯಲ್ಲಿ ಆಚರಣೆಗೆ ತಂದು ಮುಂದಿನ ಪೀಳಿಗೆಗೆ ಸದುಪಯೋಗವಾಗುವಂತೆ ಮಾಡಿದರೆ ತಾವು ಬಹಳ ಸಹಾಯ ಮಾಡಿದಂತಾಗುತ್ತದೆ. ನಮ್ಮ ನಾಗರೀಕತೆ ಎಷ್ಟು ಬೆಳೆದರೂ ಕೂಡ ಪ್ರತಿಯೊಬ್ಬ ವ್ಯಕ್ತಿಗೆ ಕೂಡ ಇದರ ಉಪಯೋಗ ಇದ್ದೇ ಇದೆ. ಇಂತಹ ಸನ್ನಿವೇಶದಿಂದ ಎಚ್ಚೆತ್ತು ನೋಡಿಕೊಳ್ಳದೆ ಹೋದರೆ ಇನ್ನು ಮುಂದೆ ಬಹಳ ದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಮ್ಮ ದೇಶದ ಅಗ್ರಗಣ್ಯ ವ್ಯಕ್ತಿಗಳಾದ ಶ್ರೀ ಸಂಜಯ ಗಾಂಧಿಯವರು ಒಂದು ರಾಷ್ಟ್ರ ವ್ಯಾಪ್ತಿ ಚಳುವಳಿಯನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ನಾನು ಮಾನ್ಯ ಸಚಿವರ ಗಮನಕ್ಕೆ ಸಣ್ಣ ಪುಟ್ಟ ನ್ಯೂನತೆಗಳನ್ನು ತಂದಿರುತ್ತೇನೆ.

ಇನ್ನು ಒಂದು ವಿಷಯ ಹೇಳುವುದಾದರೆ ಕಾಡಿನಲ್ಲಿ ಸಣ್ಣಪುಟ್ಟ ರೈತರು ಅವರ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳು ಅಂದರೆ ನೇಗಿಲು, ನೊಗ ಸಾರೆ ಪಿಕಾಸಿಗಳಿಗೆ ಬೇಕಾಗುವ ಸಣ್ಣಪುಟ್ಟ ಮರ ಮುಟ್ಟುಗಳನ್ನು ಹೊಂದಿಸಿಕೊಳ್ಳಬೇಕಾದರೆ ಅದಕ್ಕೆ ಬೇಕಾಗುವ ಸಣ್ಣಪುಟ್ಟ ಗಿಡಗಳನ್ನು ಕಡಿಯಬೇಕಾದರೆ ಟ್ರೀ ಆಫೀಸರ್ಸ್ ಒಪ್ಪಿಗೆಯನ್ನು ಪಡೆಯಬೇಕು. ಇದರಿಂದ ಸಣ್ಣಪುಟ್ಟ ರೈತರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅವರಿಗೆ ಅನುಕೂಲವಾಗುವಂತೆ ಈ ಬಿಲ್ಲಿನಲ್ಲೇ ಒಂದು ಸಣ್ಣ ತಿದ್ದುಪಡಿಯನ್ನು ತಂದು ಅವರಿಗೆ ಸಹಾಯ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಇದರಿಂದ ಹಳ್ಳಿಗಾಡಿನ ಜನರಿಗೆ ಬಹಳ ತೊಂದರೆಯುಂಟಾಗುತ್ತದೆ ಆದ್ದರಿಂದ ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಬೇಕೆಂದು ಹೇಳುತ್ತೇನೆ. ಜೊತೆಗೆ ಸಣ್ಣಪುಟ್ಟ ಗುಡಿಸಲು ಕಟ್ಟುವವರಿಗೂ ಕೂಡಾ ಸಹಾಯವಾಗುವಂತೆ ಒಂದು ಸಣ್ಣ ತಿದ್ದುಪಡಿಯನ್ನು ತಂದು ಅವರಿಗೆ ಸಹಾಯ ಮಾಡಬೇಕೆಂದು ಹೇಳಿ ಯಾವುದೇ ಅಡಚಣೆ ಇದ್ದರೂ ಸಹಿತ ಅದನ್ನು ಬಗೆಹರಿಸಿ ಉಪಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಸ್ಯಗಳ ಸಂರಕ್ಷಣೆಗೆ ಬೇಕಾದಂತಹ ಒಳ್ಳೆಯ ಸೂಕ್ತವಾದ ಉದ್ದೇಶಗಳು ಈ ಮಸೂದೆಯಲ್ಲಿರುವುದರಿಂದ ಮಾನ್ಯ ಮಂತ್ರಿಗಳನ್ನು ಇದಕ್ಕಾಗಿ ಅಭಿನಂದಿಸಬೇಕಾಗಿದೆ. ಇದನ್ನು ಕಾನೂನಿಂದಲೇ ವನಸಂಪತ್ತನ್ನು ಹೆಚ್ಚಿಗೆಗೆ ಬೆಳೆಸುವುದಕ್ಕೆ ಸಾಧ್ಯವಾಗಲಾರದು. ಇದಕ್ಕೆ ಸಾರ್ವಜನಿಕರು ಸಹ ಪ್ರೋತ್ಸಾಹ ಕೊಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಗಮನಹರಿಸಬೇಕು. ಈ ಒಂದು ಸಣ್ಣ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಹೇಳುತ್ತೇನೆ. ಅದು ಏನೆಂದರೆ ಟೀ ಎಸ್ಟೇಟ್‌ಗಳ ಮಧ್ಯದಲ್ಲಿ ಇರುವಂತಹ ಕಟ್ಟಿಗೆಯನ್ನು ಕಡಿಯದೆ ಹೋದರೆ ಕಾಫಿ ಕ್ಯೂರಿಂಗ್ ಮಾಡಲು ಬಹಳ ತೊಂದರೆ ಬರುವುದರಿಂದ ಅದಕ್ಕೆ ಬೇಕಾದಂತಹ ತಿದ್ದುಪಡಿ ತಂದು ಸಹಾಯ ಮಾಡಬೇಕು. ಇಲ್ಲದೇ ಹೋದರೆ ಒಂದು ನೋಟಿಫಿಕೇಷನ್ ಮುಖಾಂತರವೇ ಆಗಲಿ ಇದಕ್ಕೆ ರಕ್ಷಣೆ ಕೊಡಲೇಬೇಕು. ಇಲದೆ ಹೋದನೆ ಕಾಫಿಯಿಂದ ಸಾಕಷ್ಟು ಫಾರಿನ್ ಎಕ್ಸ್‌ಚೇಂಜ್ ಬರುವುದರಿಂದ ಇದಕ್ಕೆ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ. ಇದಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲೇಬೇಕು. ಇದಕ್ಕೆ ಯಾರ ಬಿನ್ನಾಭಿಪ್ರಾಯವಿಲ್ಲದಿರುವುದರಿಂದ ಕೊನೆಯದಾಗಿ ಅರಣ್ಯ ಮಂತ್ರಿಗಳ ಗಮನಕ್ಕೆ ತರುವುದು ಇನ್ನೊಂದು ವಿಷಯವೇನೆಂದರೆ ಇನ್ನು ಮುಂದೆ ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳುವುದರಿಂದ ಅದರಲ್ಲಿ ಕಾಳಿ, ವರಾಹಿ ಯೋಜನೆಗಳು ಬರುವುದರಿಂದ ಅದರ ಮುಳುಗಡೆಗೆ ಸಿಕ್ಕಿ ಎಷ್ಟೋ ಕಾಡು ಹಾಳಾಗುವ ಸಂಭವವಿದೆ. ನಮ್ಮ ಕಾಳಿ ಯೋಜನೆಯಿಂದ ಸಾಕಷ್ಟು ಕಾಡು ನಾಶವಾಗಿ ಹೋಗಿದೆ ಕಾಳಿ ಯೋಜನೆಯಿಂದ ಸಾಕಷ್ಟು ಕಾಡು ನಾಶವಾಗಿರುವುದರಿಂದ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಬೇರೆ ಕಡೆ ಕಾಡನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು, ಆ ರೀತಿ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ಒಂದು ಮರವು ಕೂಡ ಮುಳುಗಡೆಯಾಗದಂತೆ ನೋಡಿಕೊಳ್ಳಬೇಕು. ಇನ್ನು ಮುಂದೆ ಬರತಕ್ಕಂಥ ವರಾಹಿ ಯೋಜನೆಯ ಸರ್ವೇಕ್ಷೆ ನಡೆಸಿ ಮರಮುಟ್ಟುಗಳನ್ನು ಕಡಿಯುವುದರಿಂದ ಎಷ್ಟು ಅರಣ್ಯ ನಾಶವಾಗುತ್ತದೆ ಎನ್ನುವುದನ್ನು ನೋಡಿ ಅದರಿಂದ ಎಷ್ಟು ಪ್ರಯೋಜನ ಜನರಿಗೆ ಸಿಕ್ಕುತ್ತದೆ ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಂಡು ನಮ್ಮ ಸಣ್ಣ ಪುಟ್ಟ ರೈತಾಪಿ ಜನರಿಗೆ ಸಹಾಯವಾಗುವಂತೆ ನೋಡಿಕೊಳ್ಳಬೇಕು. ಸಾಮಾನ್ಯ ರೈತಾಪಿ ಜನರಿಂದ ಮಾತ್ರ ನಮ್ಮ ಕಾಡು ಇವತ್ತಿನ ದಿವಸ ನಾಶವಾಗುತ್ತಿಲ್ಲ. ಕೇವಲ ಕಳ್ಳ ಸಾಗಣೆದಾರರಿಂದ ಕಾಡು ನಾಶವಾಗುತ್ತದೆ. ಅದನ್ನು ತಪ್ಪಿಸಿ ನಮ್ಮ ರೈತಾಪಿ ಜನರಿಗೆ ಸಹಾಯ ಸಿಗುವಂತೆ ಮಾಡಬೇಕೆಂದು ಮತ್ತೊಮ್ಮೆ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇಂತಹ ಕಳ್ಳಸಾಗಣೆದಾರರ ಮೇಲೆ ಏನಾದರೂ ದೂರು ತಮ್ಮ ಗಮನಕ್ಕೆ ಬಂದಾಗ ಶಿಕ್ಷಿಸಲಿಕ್ಕೆ ಸಾಕಷ್ಟು ಕಾನೂನಿನ ನೆರವು ಇಲ್ಲದೆ ಹೋದರೆ ಈ ತುರ್ತುಪರಿಸ್ಥಿತಿ ಕಾನೂನಿನ ಅಂದರೆ ಮೀಸಾ ಪ್ರಕಾರ ಅವರಿಗೆ ಕಠಿಣ ಶಿಕ್ಷೆ ಕೊಡುವುದರ ಮೂಲಕ ನಮ್ಮ ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳಬೇಕು ಎಂದು ತಮಗೆ ಹೇಳಿ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಈ ಮಸೂದೆಯನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ. ನೂತನವಾಗಿ ಈ ಅರಣ್ಯ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಅರಣ್ಯ ಸಚಿವರು ತಂದಿರತಕ್ಕಂಥ ಕರ್ನಾಟಕ ಪ್ರಿಸರ್ವೇಷನ್ ಆಫ್ ಟ್ರೀಸ್ ಬಿಲ್, ೧೯೭೬ ಈ ವಿಧೇಯಕವನ್ನು ಬಹಳ ವಿಷಾದದಿಂದ ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಆಡಲಿಕ್ಕೆ ಇಷ್ಟ ಪಡುತ್ತೇನೆ. ನಾನು ಮಲೆನಾಡು ಪ್ರದೇಶದಿಂದ ಬರದೆ ಇದ್ದರೆ, ರಾಯಚೂರು, ಅಥವಾ ಬಯಲು ಪ್ರದೇಶದಿಂದ ಬಂದಿದ್ದವನಾಗಿದ್ದರೆ ಇದಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಿದ್ದೆನೇನೋ ! ಆದರೆ ಮರಗಳ ಸಂರಕ್ಷಣೆ ವಿಧೇಯಕ ಏನು ಇದೇ ಇದನ್ನು ನೋಡಿದಾಗ ಮಲೆನಾಡು ಸಸ್ಯಗಳ ಮತ್ತು ವನಸಂಪತ್ತಿನ ಮೇಲೆ ಪ್ರೀತಿ ಇರತಕ್ಕಂಥ ಜನರು ಅನೇಕ ಸಾರಿ ರೈತರ ಬಗ್ಗೆ ಮತ್ತು ಹಳ್ಳಿಗಾಡಿನ ಜನರ ಬಗ್ಗೆ ಮಮತೆ ಇರುವವರು ಈ ವಿಧೇಯಕವನ್ನು ಅಡಿಯಿಂದ ಮುಡಿಯವರೆಗೆ ವಿರೋಧಿಸದೇ ವಿಧಿಯಿಲ್ಲ. ಈ ಶಾಸನದಲ್ಲಿ ಅಡಗಿರತಕ್ಕಂಥ ಕಟ್ಟುಕಟ್ಟಳೆಯನ್ನು ನೋಡಿದರೆ ಇದು ಕೆಲವು ಅಧಿಕಾರಿಗಳಿಗೆ ಅಧಿಕಾರ ಕೊಡತಕ್ಕಂಥದ್ದಕ್ಕೆ ತಂದ ವಿಧೇಯಕವೆಂದು ಹೇಳದೆ ವಿಧಿಯಿಲ್ಲ ಜೊತೆಗೆ ಅರಣ್ಯ ಇಲಾಖೆ ಪೂರ್ಣ ಸ್ವಾಯತ್ತತೆಯನ್ನು ಗಳಿಸಿ ರೈತರ ಮೇಲೆ, ಅರಣ್ಯದ ಪ್ರದೇಶದ ಜನರ ಮೇಲೆ ಏನೋ ಒಂದು ರೀತಿಯ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಹವಣಿಸುತ್ತಿದೆಯೆಂದು ನನಗನ್ನಿಸುತ್ತದೆ.

5–30 P.M.

ಈ ಬಿಲ್ಲಿನಲ್ಲಿ ತಾವು ಒಬ್ಬ ಮರಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಹೇಳಿದ್ದೀರಿ. ಇವತ್ತು ವನ ಸಂರಕ್ಷಣೆಯ ಬಗ್ಗೆ ಹೇಳುವುದಾದರೆ ಅದಕ್ಕೆ ನಮ್ಮ ಸಂಪೂರ್ಣ ಬೆಂಬಲ ಉಂಟು. ಇವತ್ತು ವನ ಭಕ್ಷಿಸತಕ್ಕಂಥವರು ಯಾರು ? ಅವರ ಮೇಲೆ ನೀವು ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಪಾಪ ಒಬ್ಬ ಬಡ ಕೂಲಿಗಾರ, ಬೇಸಾಯಗಾರ, ಕೂಲಿ ಮುಗಿಸಿಕೊಂಡು, ಗದ್ದೆಯಿಂದ ಮನೆಗೆ ವಾಪಸ್ಸು ಬರುವಾಗ, ಅವನು ತಲೆಯ ಮೇಲೆ ಚಿಕ್ಕ ಹೊರೆಯ ಸೌದೆಯನ್ನು ತಲೆಯ ಮೇಲೆ ಇಟ್ಟುಕೊಂಡು ಬರುವಾಗ ನಿಮ್ಮ ಗರುಡಗಳ ಕೈಗೆ ಸಿಕ್ಕಿ ಬಿದ್ದರೆ ಅವರಿಗೆ ಹಿಂಸೆಯನ್ನು ಕೊಡುತ್ತಾರೆ. ಗಾರ್ಡ್ ಎನ್ನುವುದನ್ನು ನಮ್ಮ ಕಡೆ ಗರುಡ ಎಂದು ಹೇಳುತ್ತಾರೆ. ತಾಲ್ಲೂಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹದ್ದುಗಳಿರುತ್ತವೆ, ಕೊನೆಗೆ ತಂದಿಯಲ್ಲಿ ರಣ ಹದ್ದುಗಳು ಇರುತ್ತವೆ. ಮೊನ್ನೆ ದಿವಸ ನಾನು ಕಡತರು ಯುವಜನ ಸಮ್ಮೇಳನಕ್ಕೆ ಹೋಗುತ್ತಿದ್ದೆ. ಆಗ ಒಬ ಪರದೇಶಿ ಅವನ ಬಟ್ಟೆ ಬರೆಯನ್ನು ನೋಡಿದರೇ ಗೊತ್ತಾಗುತ್ತದೆ. ಗತಿಯಿಲ್ಲದವನು, ನಿರ್ಗತಿಕ, ಅವನು ಅನ್ನ ಬೇಯಿಸುವುದಕ್ಕಾಗಿ ಒಂದು ಚಿಕ್ಕ ಸೌದೆ ಹೊರೆಯನ್ನು ತಲೆಯ ಮೇಲಿಟ್ಟುಕೊಂಡು ಬರುತ್ತಿದ್ದನೆಂದು ಕಾಣುತ್ತದೆ. ಇಬ್ಬರು ಗರುಡರ ಕೈಗೆ ಸಿಕ್ಕಿಹಾಕಿಕೊಂಡು ಬಿಟ್ಟಿದ್ದ. ನಾನು ಸ್ಕೂಟರ್ ಮೇಲೆ ಹೋಗುತ್ತಿದ್ದೆ. ಇದನ್ನು ನೋಡಿ ನಿಲ್ಲಿಸಿ, ಒಬ್ಬ ಗರುಡ ಪರಿಚಯವಿದ್ದುದರಿಂದ ಅವನನ್ನು ಕರೆದು ಏನು ವಿಷಯವೆಂದು ಕೇಳಿದೆ. ಅದಕ್ಕೆ ಅವನೂ ಏನೂ ಇಲ್ಲ ಸ್ವಾಮಿ ಕ್ಷೇಮ ಸಮಾಚಾರ ವಿಚಾರಿಸಿಕೊಳ್ಳುತ್ತಿದ್ದೇವೆಂದು ಹೇಳಿದ. ಅದಕ್ಕೆ ಆ ಪರದೇಶಿ ಇಲ್ಲ ಸ್ವಾಮಿ ನನ್ನನ್ನು ಹಿಡಿದುಕೊಂಡು ಬಂದಿದ್ದಾರೆ. ಮತ್ತೆ ಎಲ್ಲಿಗೋ ಕರೆದುಕೊಂಡು ಹೋಗುತ್ತಾರಂತೆ ಎಂದು ಹೇಳಿದ. ಅದಕ್ಕೆ ನಾನು ಅವನಿಗೆ ನೋಡು ನಮ್ಮ ಜಿಲ್ಲೆಯಲ್ಲಿ ಇಂಥ ಒಬ್ಬ ದೊಡ್ಡ ಮನುಷ್ಯರಿದ್ದಾರೆ ಅವರ ಮನೆಗೆ ಹೋಗಿ ನೋಡು, ಅವರು ಹೇಗೆ ನಾಟಿ ಮರವನ್ನು, ಸೌದೆಯನ್ನು ಸಾಗಿಸಲಿಕ್ಕೆ ವ್ಯವಸ್ಥೆ ಮಾಡಿ ಕಳ್ಳ ವ್ಯವಹಾರ ಮಾಡುತ್ತಿದ್ದಾರೆ. ಅವರ ಹೆಸರನ್ನೂ ಹೇಳುತ್ತೇನೆ. ಹೋಗಿ ಅವರನ್ನು ಹಿಡಿ ಎಂದು ಹೇಳಿದೆ. ಅಂಥವರ ಮನೆಯಲ್ಲಿ ಗಂಜಲ ಎತ್ತಿ ಹಾಕಿ, ದನಕರುಗಳನ್ನು ಸಾಕಿಕೊಂಡು ಪರದೇಶಿಯಾಗಿರತಕ್ಕಂಥ ಅಂಥ ಬಡವನನ್ನು ಏತಕ್ಕೆ ಹಿಡಿದು ಹಿಂಸೆ ಮಾಡುತ್ತೀಯಾ ಎಂದು ಹೇಳಿದೆ. ನಮ್ಮ ಮಲೆನಾಡಿನ ಪ್ರದೇಶದಲ್ಲಿ, ಹಳ್ಳಿ ಗಾಡಿನಲ್ಲಿರುವ ಬಡವರ ಕಷ್ಟ ಪರಿಸ್ಥಿತಿ ಅಲ್ಲಿಂದ ಬಂದಂಥ ಮಾನ್ಯ ಸದಸ್ಯರಿಗೆಲ್ಲರಿಗೂ ಚಿರ ಅನುಭವದ ವಿಷಯ. ಇವತ್ತು ನಿರ್ಗತಿಕರಾಗಿರತಕ್ಕಂಥವರನ್ನು, ಬೇಸಾಯಗಾರರನ್ನು, ಗೇಣಿದಾರರನ್ನು, ಸಣ್ಣ ಬೇಸಾಯಗಾರರಾಗಿರುವ ಬಡವರನ್ನು ಹಿಡಿದು ಅವರಿಗೆ ಹಿಂಸೆ ಕೊಡತಕ್ಕಂಥ ಪ್ರವೃತ್ತಿ ಏನಿದೆ ಅದನ್ನು ಸಹಿಸುವುದಕ್ಕೂ ಸಾಧ್ಯವಿಲ್ಲ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಯಾರು ಲಾಭಕೋಸ್ಕರವಾಗಿ, ಮಾರಾಟ ಮಾಡುವುದಕೋಸ್ಕರವಾಗಿ ಕಾಡಿನಲ್ಲಿ ಸೌದೆಯನು ಕಡಿದು ಮಾರಾಟ ಮಾಡಿ ಲಾಭವನ್ನು ಸಂಪಾದನೆ ಮಾಡುವುದಕ್ಕೆ ಯಾರು ಪ್ರಯತ್ನ ಮಾಡುತ್ತಾರೋ ಅಂಥವರ ಮೇಲೆ ಟ್ಯಾಕ್ಸ್ ಹಾಕಿ, ಫೈನ್ ಹಾಕಿ ಅಂಥವರನ್ನು ಜೈಲಿಗೆ ಕಳುಹಿಸಿ ಅದರ ಬಗ್ಗೆ ನಮ್ಮ ಭಿನಾಭಿಪ್ರಾಯ ವೇನೂ ಇಲ್ಲ. ಅದನ್ನು ತಾವು ಮಾಡುವುದಿಲ್ಲ. ಮಲೆನಾಡಿನ ವಿಷಯ ತಮಗೆ ಗೊತ್ತೇ ಇದೆ. ಮಲೆನಾಡಿನಲ್ಲಿ ಗಾಳಿ ಮಳೆ ಎರಡೂ ಹೆಚ್ಚು ನಮ್ಮಲ್ಲಿ ಹುಲ್ಲಿನ ಕೊಟ್ಟಿಗೆಗಳನ್ನು ಕಟ್ಟಿಕೊಂಡಿರುತ್ತಾರೆ. ಮಳೆಗಾಲದಲ್ಲಿ ಮಳೆ ಗಾಳಿಗೆ ಕಂಬಗಳು ಮುರಿದು ಹೋಗಿ ಬಿಡುತ್ತವೆ, ಆಗ ಅವನು ನಿಮ್ಮ ಕಾನೂನಿನ ಪ್ರಕಾರ ಅವನು ತನ್ನ ಮನೆಯ ರಿಪೇರಿ ಮಾಡಿಕೊಳ್ಳಲು ಬೇಕಾದ ಸೌದೆಯನ್ನು ಪಡೆಯಲು ಅರ್ಜಿ ಕೊಟ್ಟು ೩೦–೬೦ ದಿವಸಗಳ ಕಾಲ ಕಾದು, ಆಫೀಸರನ್ನು ಕಂಡು ಪರ್ಮಿಷನ್ ತೆಗೆದುಕೊಂಡು ಬರುವುದರೊಳಗಾಗಿ ಅವನ ಮನೆ ಪೂರ್ತಿ ಬಿದ್ದು ಹೋಗಿರುತ್ತದೆ. ಅದರ ಬದಲು ಅವನು ತನ್ನ ಮನೆಯ ಹಿತ್ತಿಲನಲ್ಲಿರುವ ಕಾಡಿಗೆ ಹೋಗಿ ಸಣ್ಣ ಮರವನ್ನು ಕಡಿದುಕೊಂಡು ಬಂದು ತನ್ನ ಮನೆಗೆ ಆಸರೆಯಾಗಿರುವಂಥಾದ್ದು ಏನು ಬಿದ್ದು ಹೋಗಿದೆ ಅದಕ್ಕೆ ಆಸರೆ ಕೊಡಲು ಮರವನ್ನು ಕಡೆದುಕೊಂಡು ಬರುವಾಗ ಅವನು ಸಿಕ್ಕಿ ಬಿದ್ದನೆಂದರೆ ಅವನು ಜೈಲಿಗೆ ಹೋಗಬೇಕಾಗುತ್ತದೆ. ಅವನು ಜೈಲಿನಿಂದ ಬರುವುದರೊಳಗಾಗಿ ಅವನ ಮನೆಯವರು ಬೀದಿ ಪಾಲಾಗಿರುತ್ತಾರೆ. ಹೀಗೆ ಬಡವರ ಮೇಲೆ ತಾವು 'ಗುಬ್ಬಚ್ಚಿಯ ಮೇಲೆ ಬ್ರಹ್ಮಾಸ್ತ್ರ'ವನ್ನು ಉಪಯೋಗಿಸಿದ ಹಾಗೆ ಉಪಯೋಗಿಸುತ್ತಿದ್ದೀರಿ, ಆದರೆ ತಾವು ಇವತ್ತು ದೊಡ್ಡವರ ಮೇಲೆ ಏತಕ್ಕೆ ಬ್ರಹ್ಮಾಸ್ತ್ರವನ್ನು ಬಿಡುತ್ತಿಲ್ಲ ? ಜವಾಬ್ದಾರಿಯಿಂದ ಈ ಮಾತನ್ನು ನಾನು ಹೇಳುತ್ತೇನೆ. ನನ್ನ ತಾಲ್ಲೂಕಿನ ಮಂಡಗದ್ದೆ ಹೋಬಳಿಯಲ್ಲಿ ಯಾವುದೋ ಒಂದು ಕಡೆಗೆ ಮರಗಳನ್ನು ಕಡೆಯಲು ಲೈಸನ್ಸ್‌ನ್ನು ತೆಗೆದುಕೊಂಡ ಒಬ್ಬ ವ್ಯಕ್ತಿ ಪ್ರತಿ ದಿನ ೫–೧೦ ಲೋಡ್ ಮರಗಳನ್ನು ಕಡಿದು

ಲಾರಿಗಳಲ್ಲಿ ತುಂಬಿಕೊಂಡು ಹೋಗುತ್ತಿದ್ದರು ನಿಮ್ಮ ಅಧಿಕಾರಿಗಳು ಏತಕ್ಕೆ ಸುಮ್ಮನೇ ಕೂತಿದ್ದಾರೆ ? ಅಂಥ ಕದೀಮರನ್ನು ತಾವು ಏತಕ್ಕೆ ಹಿಡಿಯುವುದಿಲ್ಲ ? ನಾವು ಈ ಮಾತನ್ನು ಹೇಳಿದರೆ ನಮ್ಮ ಮೇಲೆ ಅಪಪ್ರಚಾರ ಮಾಡುತ್ತೀರಿ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳವರು ೩ ಸಾರಿ ಆ ಅಧಿಕಾರಿಯನ್ನು ವರ್ಗ ಮಾಡಿ ಎಂದು ಆರ್ಡರ್ ಮಾಡಿದರೂ ಕೂಡ, ಆ ರೀತಿ ವರ್ಗ ಮಾಡದೇ ಅಲ್ಲಿಯೇ ಉಳಿಸಿಕೊಂಡು ಮುಖ್ಯ ಮಂತ್ರಿಗಳ ಮಾತಿಗೂ ಬೆಲೆ ಕೊಡದೇ ಇರತಕ್ಕಂಥ ಅಧಿಕಾರಿಗಳು ನಿಮ್ಮ ಇಲಾಖೆಯಲ್ಲಿ ಇದ್ದಾರೆ. ಇಂಥವರ ಕೈಯಲ್ಲಿ ತಾವು ಅಸ್ತ್ರವನ್ನು ಕೊಡುತ್ತಿದ್ದೀರಿ. ಇವರು ನಮ್ಮ ರಾಜ್ಯದ ಅರಣ್ಯವನ್ನು ಸಂರಕ್ಷಣೆ ಮಾಡುತ್ತಾರೆ ಎನ್ನುವ ಬಗ್ಗೆ ನಮಗೆ ವಿಶ್ವಾಸವಿಲ್ಲ.

ಮಾನ್ಯ ಅಧ್ಯಕ್ಷರೇ, ಇವತ್ತು ಮರಾಧಿಕಾರಿಯನ್ನು ವೃಕ್ಷ ಸಂರಕ್ಷಣೆಗಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ ಸಂತೋಷ. ಅದರ ಬಗ್ಗೆ ನಮಗೆ ಭಿನ್ನಾಭಿಪ್ರಾಯವಿಲ್ಲ. ತಾವು ತಂದಿರತಕ್ಕಂಥ ಬಿಲ್ಲಿನಲ್ಲಿ ಚಾಪ್ಟರ್ ೪, ಸೆಕ್ಷನ್ ೭ (ಬಿ) ನಲ್ಲಿ ಈ ರೀತಿ ಇದೆ —

"Carrying out a census of the existing trees and obtaining, wherever considered necessary, declarations from all owners or occupants about the number of trees in their lands ; "

ಅವರು ಅದನ್ನು ಪಡೆಯಬೇಕು. ಅದಕ್ಕೆ ಅವರು ಡಿಕ್ಲರೇಷನ್ ಕೊಡಬೇಕೆಂದು ಹೇಳಿದ್ದೀರಿ. ಇದರಿಂದ ಏನಾಗುತ್ತದೆ ಎಂದರೆ ನಾವು ಈಗ ಲ್ಯಾಂಡ್ ರಿಫಾರಂಸ್‌ಗೆ ಡಿಕ್ಲರೇಷನ್ ಕೊಟ್ಟ ಹಾಗೆ ಕೊಡಿ ಎಂದು ಕೇಳಬೇಕಾಗುತ್ತದೆ. ಇದು ಒಂದು ದೊಡ್ಡ ಸಮಸ್ಯೆ. ಮುಂದೆ, (c) says as follows :

"specifying the standards regarding the number and kinds of trees which each locality, type of land and premises shall have and which shall be planted subject to a minimum of five trees per hectare in the case of rural areas." ಇದು ಸಂತೋಷದ ವಿಷಯ. ಹಳೆಯದು ಬಿದ್ದು ಹೋಗಿದ್ದರೆ ಅದರ ಜಾಗದಲ್ಲಿ ಅದರ ಸುತ್ತ ಮುತ್ತ ಒಂದಕ್ಕೆ ಎರಡರಷ್ಟು ಮರಗಳನ್ನು ನಡಬೇಕು ಎನ್ನುವ ಬಗ್ಗೆ ನಮ್ಮ ಭಿನ್ನಾಭಿಪ್ರಾಯವೇನೂ ಇಲ್ಲ. Chapter V ರಲ್ಲಿ..."Restriction on felling of trees" ಎಂದು ಹೇಳಿದ್ದೀರಿ. ಯಾರು ಮರಗಳನ್ನು ಕಡಿಯುವುದು ? ಸಾಮಾನ್ಯವಾಗಿ ಯಾರೂ ನಮ್ಮಲ್ಲಿ ಮರಗಳನ್ನು ಕಡಿಯುವುದಿಲ್ಲ. ನಿಜವಾಗಿಯೂ ಮರಗಳನ್ನು ಕಡಿಯುವವರ್ಯಾರೆಂದರೆ ಕಾಂಗ್ರೆಸ್ಸಿನವರೇ ಆ ಕೆಲಸ ಮಾಡುವುದು. ಇದರ ಬಗ್ಗೆ ತಮಗೆ ನಾನು ಏನಾದರೂ ಹೆಸರು ಕೊಟ್ಟರೆ ಅವರನ್ನು ಹಿಡಿಯುವುದೇನೋ ಹಿಡಿಯುತ್ತೀರಿ ಆದರೆ ಮತ್ತೆ ಬಿಟ್ಟು ಬಿಡುತ್ತೀರಿ."

ಉಪಾಧ್ಯಕ್ಷರು.—ಅವರ ಹೆಸರನ್ನು ಹಿಂದೆ ಕೊಟ್ಟಿದ್ದೀರಾ ?

ಶ್ರೀ ಕೋಣಂದೂರು ಲಿಂಗಪ್ಪ.—ಹೆಸರನ್ನು ಕೊಡುವುದು ಬಿಡುವುದು ಗೊತ್ತೇ ಇದೆ. ತಾವು ತಂದಿರತಕ್ಕಂಥ ಮಸೂದೆಯ ಉದ್ದೇಶವೇನೋ ಘನವಾಗಿದೆ, ಅದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ವಿಲ್ಲ. ಆದರೆ ಅದನ್ನು ಕಾರ್ಯಗತ ಮಾಡುವುದು ಯಾರ ಮೇಲೆ ? ಈ ಕಾನೂನಿನ ದುರುಪಯೋಗ ನಡೆಯುತ್ತದೆ ಅದರ ಬಗ್ಗೆ ನಮಗೆ ಕಾಳಜಿಯೇ ಹೊರತು, ತಾವು ಮಸೂದೆ ತಂದಿರತಕ್ಕಂಥ ಸಮಗ್ರ ವಾದ ಉದ್ದೇಶವೇನಿದೆ ಅದರ ಬಗ್ಗೆ ಯಾವ ಬಿನ್ನಾಭಿಪ್ರಾಯವೂ ಇಲ್ಲ. ಇಂಥ ಕಾನೂನುಗಳು ನಮ್ಮಲ್ಲಿ ಬೇಕಾದಷ್ಟು ಇದ್ದಾವೆ ಆದರೆ ಅದನ್ನು ಇಂಪ್ಲಿಮೆಂಟ್ ಮಾಡುವಾಗ ಯಾರ ಮೇಲೆ ಏನು ಪರಿಣಾಮವಾಗುತ್ತದೆ ಎನ್ನುವ ಅನುಭವ ನನಗೆ ಇರುವುದರಿಂದ ಈ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಆ ಮೇಲೆ, "No person shall fell any tree or cause any tree to be felled in any land" ಎಂದು ಹೇಳಿದ್ದೀರಿ. ನಮ್ಮ ಮಲೆನಾಡಿನಲ್ಲಿ ಒಂದು ಸಂಪ್ರದಾಯವಿದೆ. ಅದು ಏನೆಂದರೆ ಒಬ್ಬ ತಾನು ನಾಟಿ ಮರವನ್ನು ಬೆಳೆದರೆ ಅದನ್ನು ತಾನೇ ಉಪಯೋಗಿಸಿಕೊಳ್ಳಬೇಕು ಎನ್ನುವಂಥ ಸಂಪ್ರದಾಯ ಪರಂಪರಾನುಗತವಾಗಿ ಬೆಳೆದುಕೊಂಡು ಬಂದಿದೆ. ಅದನ್ನು ಕಡಿಯುವುದಕ್ಕೆ

ಈಗ ತಾವು ರಿಸ್ಟ್ರಿಕ್ಷನ್ ಹಾಕಿದ್ದೀರಿ. ಈಗ ನಾನು ಹೇಳುವುದು ಏನೆಂದರೆ ತೇಗ, ರೋಜ್ ವುಡ್, ನಾಟಿ ಮರಗಳು ಯಾವುವು ಬೆಲೆ ಬಾಳತಕ್ಕಂಥ ಮರಗಳಿವೆ ಅವುಗಳನ್ನು ಉಪಯೋಗಿಸುವುದಕ್ಕೆ ಪರ್ಮಿಷನ್ ತೆಗೆದುಕೊಂಡು ಮುಂದೆ ಆ ಜನ 'ಏನಿದ್ದಾರೆ ಅವರು ಒಳ್ಳೆಯ ಜನರ ಹಾಗೆ ಮುಖವಾಡವನ್ನು ಹಾಕಿಕೊಂಡು ವ್ಯಾಪಾರ ಮಾಡುವವರಿದ್ದಾರೆ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ನಮ್ಮ ಕಡೆ ''ಕಟ್ಟಿಗೆ ಮರ''ಗಳು ಎಂದು ಕೆಲವು ಮರಗಳಿವೆ. ಅದನ್ನು ಕಡಿದರೆ, ಅಧಿಕಾರಿಗಳು ಬಂದು ಹಿಡಿದರೆ ಹೇಗೆ ? ನಮ್ಮಲ್ಲಿ, ತಮ್ಮ ಹಾಗೆ, ವಿದ್ಯುತ್ ಸರಬರಾಜಿಲ್ಲ ; ಆಲ್ ಎಲೆಕ್ಟ್ರಿಫೈಡ್ ಮನೆಗಳಿಲ್ಲ ; ಸಂಘದ ಮೂಲಕ ಮನೆ ಮನೆಗೂ ಸೀಮೆ ಎಣ್ಣೆ ಸರಬರಾಜು ಮಾಡುವ ವ್ಯವಸ್ಥೆ ಇಲ್ಲ. ಆದುದರಿಂದ, ನಾವು ಕಟ್ಟಿಗೆಯಲ್ಲೇ ಅನ್ನ ಬೇಯಿಸಬೇಕು. ಅದನ್ನೂ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ, ನಾವು ಯಾವ ರೀತಿ ಅನ್ನ ಬೇಯಿಸಬೇಕು ? ಹಸಿ ಅಕ್ಕಿಯನ್ನೇ ತಿನ್ನೋಣವೇ? ನೀವೆಲ್ಲಾ ಹಸಿ ಹುರುಳಿಯನ್ನು ತಿನ್ನುತ್ತೀರಾ ಕಟ್ಟಿಗೆಯನ್ನು ಸಣ್ಣಪುಟ್ಟ ಬಡವರು ಅಡುಗೆ ಮಾಡಲಿಕ್ಕೆ, ಸ್ನಾನಕ್ಕೆ ಉಪಯೋಗಿಸುವ ಉದ್ದೇಶದಿಂದ ಮರಗಳನ್ನು ಬೆಳೆದರೆ, ಅವನ್ನೂ ಕಡಿಯಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ ? ಇನ್ನೊಂದು ವಿಶೇಷವೇನೆಂದರೆ : ಕಟ್ಟಿಗೆ ತೆಗೆದುಕೊಂಡು ಹೋಗಬೇಕಾದರೆ ಅಪ್ಪಣೆ ತೆಗೆದುಕೊಳ್ಳಬೇಕಂತೆ. ಎರಡು—ಮೂರು ಗಾಡಿಗಳನ್ನು ಅಪ್ಪಣೆ ಪಡೆದುಕೊಂಡು ತೆಗೆದುಕೊಂಡು ಹೋಗಬಹುದು. ಆದರೆ ಐದು ಗಾಡಿ, ಹತ್ತು ಗಾಡಿ ಮೇಲೆ ತೆಗೆದುಕೊಂಡು ಹೋಗುವುದಕ್ಕೆ ಅಪ್ಪಣೆಯನ್ನೇ ಕೊಡುವುದಿಲ್ಲ ಎಂದು ಇದೆ. ಆದರೆ, ನಮ್ಮ ಮಲೆನಾಡಿನಲ್ಲಿ ಆರು ತಿಂಗಳು ಮಳೆ ಬೀಳುತ್ತಿರುತ್ತದೆ. ಆ ಆರು ತಿಂಗಳಿಗಾಗುವಷ್ಟು ಕಟ್ಟಿಗೆಯನ್ನು ನಾವು ಮಳೆಗಾಲಕ್ಕೆ ಮೊದಲೇ ಸಂಗ್ರಹಿಸಿಟ್ಟುಕೊಳ್ಳಬೇಕು. ಅದಿಲ್ಲದೇ ಹೋದರೆ, ಮಳೆಗಾಲದಲ್ಲಿ ಹೊರಗಡೆ ಹೋಗಿ ಹಸಿ ಕಟ್ಟಿಗೆಯನ್ನು ತಂದು, ಅದರಿಂದ ಅಡುಗೆ ಮಾಡುವುದಕ್ಕಾಗುತ್ತದೆಯೇ ? ಅಡುಗೆ ಮಾಡುವುದಿರಲಿ, ಆ ಹಸಿ ಮರಕ್ಕೆ ಬೆಂಕಿಯೇ ಹತ್ತುವುದಿಲ್ಲ. ನಿಮ್ಮ ಕಣ್ಣೆಲ್ಲಾ ಸಹ್ಯಾದ್ರಿ ಶೃಂಗಗಿರಿ ಮೇಲಿರುತ್ತವೆಯೇ ಹೊರತು, ಕೆಳಗಿರುವ ಕೋಟಿ ಕೋಟಿ ಜನರ ಗೋಳು, ಅವರ ಮೂಕವೇದನೆ ಹೇಗೆ ಗೊತ್ತಾಗುತ್ತದೆ ? ಕೆಳಗಡೆ ಇರುವ ಕೋಟಿ ಕೋಟಿ ಜನರ ಸಲುವಾಗಿ ತಾವು, ತಮ್ಮ ಕರುಣೆಯ ಕಣ್ಣನ್ನು ತೆರೆಯಬೇಕು. ನೀವು ಕಣ್ಣು ತೆರೆಯದಿದ್ದರೆ, ಒಂದು ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ ; ಆದುದರಿಂದ, ನಿಮಗೆ ಒಂದು ದೊಡ್ಡ ಪಾಪ ಮಾಡಿದಂಥ ಕೃತ್ಯ ನಾವು ಮಾಡುತ್ತಿದ್ದೇವೆ ಎನ್ನುವ ಪ್ರಜ್ಞೆ, ಮಾಡುವ ಮೊದಲೇ ಇರಬೇಕು.

> "Any person desiring to fell a tree, shall apply in writing to the concerned Tree Officer for permission in that behalf,"
>
> "On receipt of the application, the Tree Officer may, after inspecting the tree and holding such inquiry as he deems necessary, either grant permission in whole or in part or refuse permission" "ಯಾವುದೇ ಮರ" ಎಂದರೆ, ಭೂಲೋಕದಲ್ಲಿ ಬೆಳೆದದ್ದೆಲ್ಲಾ ಎಂದು ಅರ್ಥವೆ ? ಅದಕ್ಕೆಲ್ಲಾ ಮರಾಧಿಕಾರಿಯ ಅಪ್ಪಣೆ ತೆಗೆದುಕೊಂಡು ಮಾಡಬೇಕು !
>
> "Planting of adequate number of trees.—Every owner or occupant of a land shall, within a period of 5 years from the appointed day or within such extended period as the Tree Authority may specify plant trees".

ಉಪಾಧ್ಯಕ್ಷರು.—ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ತಿದ್ದುಪಡಿಯನ್ನು ಇದೀಗತಾನೇ ಕಳುಹಿಸಿದ್ದಾರೆ. ಅದು ನನ್ನ ಬಳಿ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದು ನನಗೆ ಗೊತ್ತಿಲ್ಲ. ಸರ್ಕಾರದ ಅಧಿಕಾರಿಗಳನ್ನು ಅದರಲ್ಲೂ ಅರಣ್ಯಾಧಿಕಾರಿಗಳನ್ನು ಕಾಣುವುದೆಂದರೆ ಅಸಾಧ್ಯವಾದ ಕೆಲಸ. ಅರಣ್ಯ ಮಂತ್ರಿಗಳನ್ನು ಕಾಣಬಹುದು, ಮುಖ್ಯ ಮಂತ್ರಿಗಳನ್ನು ಕಾಣಬಹುದು ಅಥವಾ ಮೇಲೆ ಹೋಗಿ ದೆಹಲಿಯಲ್ಲಿ ಯಾರನ್ನಾದರೂ ಕಾಣಬಹುದು. ಆದರೆ, ಅರಣ್ಯಾಧಿಕಾರಿಗಳನ್ನು ಕಾಣುವುದು ಬಹಳ ಕಷ್ಟ. ಅವರು ಕಾಡು ಸೇರಿಬಿಟ್ಟಿರುತ್ತಾರೆ. ನಾವು ಅವರನ್ನು 'ಶಿಕಾರಿ'' ಮಾಡಿದಂತೆ ಹಿಡಿಯಬೇಕು. ಕಾಡಿನಲ್ಲಿ ದೊಣ್ಣೆಯನ್ನು

ಕೈಯಲ್ಲಿಡಿದುಕೊಂಡು ಹೋಗುವಂತಿಲ್ಲ ; ಹೋದರೆ, ಅದನ್ನು ಎಲ್ಲಿಂದ ತಂದೆ ಎಂದು ಕೇಳುತ್ತಾರೆ ; ಬಂದೂಕ ಹಿಡಿದುಕೊಂಡು ಹೋಗೋಣವೆಂದರೆ ಅದಕ್ಕೆ ಲೈಸೆನ್ಸ್ ಇಲ್ಲ ಆದರೆ, ಅವರು ಜನರನ್ನು ''ಷಿಕಾರಿ'' ಮಾಡುತ್ತಾರೆ ; ಜನರು ತಮ್ಮ ಹೊಟ್ಟೆ ಪಾಡಿಗೆ ಹಂದಿಯನ್ನೋ ಕೋಣವನ್ನೋ ಷಿಕಾರಿ ಮಾಡುವಂತಿಲ್ಲ. ಈ ಅರಣ್ಯಾಧಿಕಾರಿಯನ್ನು ಹುಡುಕಿ ಅವರಿಗೊಂದು ಅರ್ಜಿ ಕೊಟ್ಟ ಮೇಲೆ, ಅವರು ಬಂದು ತನಿಖೆ ಮಾಡಬೇಕು. ಮರ ಏನಾಗಿದೆ, ಮುದಿಯೋ, ತರುಣವೋ, ಕೌಮಾರ್ಯವೋ, ಬಾಲ್ಯವೋ ಎಂಬುದನ್ನೆಲ್ಲಾ ಪರೀಕ್ಷೆ ಮಾಡಿ, ಆಮೇಲೆ ಪೂರ್ತಿ ಮರ ಕಡಿದುಕೋ, ಅರ್ಧ ಮರ ಕಡಿದುಕೋ ; ಅಥವಾ ಕೊಂಬೆ ಕಡಿದುಕೋ ಅಥವಾ ಮರದಲ್ಲಿರುವ ಎಲೆ ಕಡಿದುಕೋ ಎಂದು ಹೇಳಬೇಕು ! ನಾವು ಅಷ್ಟನ್ನೇ ತೆಗೆದುಕೊಳ್ಳಬೇಕು, ಈ ರೀತಿ ಇದೆ.

ಇನ್ನೊಂದು, ಯಾರು ಮರವನ್ನು ಕಡಿಯುತ್ತಾರೆ, ಅವರು ಆ ಜಾಗದಲ್ಲಿ ಮತ್ತೊಂದು ಅಥವಾ ಎರಡು ಮರಗಳನ್ನು ನೆಡಬೇಕೆಂದು ಮಾಡಿರುವುದನ್ನು ನಾನು ಒಪ್ಪುತ್ತೇನೆ. ಇದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ, ''ಎಂಪೋ'' ಕಾರ್ಖಾನೆಯವರು ಎಷ್ಟು ಮರಗಳನ್ನು ನೆಟ್ಟಿದ್ದಾರೆ ? ನಮ್ಮ ಆಗುಂಬೆ ಕಾಡನ್ನು ಮೂವತ್ತು ವರ್ಷಗಳಿಂದ ಅಧಿಕಾರದ ಗದ್ದುಗೆಯಲ್ಲಿದ್ದವರು ನಾಶ ಮಾಡಿದ್ದಾರೆ. ನನ್ನ ಊರಿನ ಮೇಲೇ ಮರಗಳನ್ನು ತುಂಬಿದ ಲಾರಿಗಳು ತಾಳಗುಪ್ಪೆ ಮತ್ತು ದಾಂಡೇಲಿ ಕಡೆಗೆ ಹೋಗುತ್ತವೆ. ಆ ಲಾರಿಗಳ ಮೇಲೆ ಏರಿ, ತೆಗೆದುಕೊಂಡು ಹೋಗುವ ಮರಗಳನ್ನು ನೋಡಿದರೆ, ಬಹುಶಃ ನನಗೆ, ನನ್ನ ಹತ್ತಿರದವರೊಬ್ಬರ ಹೆಣ ಹೋಗುತ್ತಿದ್ದಷ್ಟು ಹೃದಯ ಭಾರವಾಗುತ್ತದೆ. ಇಂಥಾ ಮರಗಳನ್ನು ಕಡಿದ ಅವರು, ಆ ಜಾಗದಲ್ಲಿ ಎಷ್ಟು ಮರಗಳನ್ನು ನೆಟ್ಟಿದ್ದಾರೆ ? ಅಷ್ಟೇ ಅಲ್ಲ, ಒಂದು ಮರ ಕಡಿಯಬೇಕಾದರೆ, ಸುತ್ತಮುತ್ತಲಿನ ಹತ್ತಾರು ಮರಗಳನ್ನು ಕಡಿಯುತ್ತಾರೆ, ಅದು ಅಲ್ಲೇ; ಅಮೇಲದು ಎಲ್ಲೆಲ್ಲೂ ; ಅದು ಎಲ್ಲಿ ಹೋಗುತ್ತದೆಂದು ಕಸಬುದಾರರೇ ಹೇಳಬೇಕು ಒಂದು ಆಶ್ಚರ್ಯದ ಸಂಗತಿ ಎಂದರೆ : ನಾನು ಅಲ್ಲಿಗೆ ಹೋಗಿ, ಒಂದು ಮರ ಕಡಿದು, ಅದನ್ನು ಎಳೆಯುವುದಕ್ಕೆ ಅದರ ಸುತ್ತಮುತ್ತಲಿರುವ ಹತ್ತಾರು ಮರಗಳನ್ನು ಕಡಿಯುತ್ತೀರಲ್ಲ ; ನಿಮ್ಮಲ್ಲಿ ದುಡ್ಡಿದೆ, ಆನೆ ಇದೆ, ಕಡೆದ ಒಂದೇ ಮರವನ್ನು ಎಳೆದು ಹಾಕಿ, ಆ ಹತ್ತು ಮರಗಳನ್ನು ರಕ್ಷಿಸಿ ; ಅವುಗಳನ್ನು ಹಾಳು ಮಾಡಬೇಡಿ ಎಂದು ಹೇಳಿದೆ. ''ಹೋಗ್ರಿ, ಹೋಗ್ರಿ ; ನಿಮಗೇನು ಗೊತ್ತು ಇದೆಲ್ಲಾ'' ಎಂದು ಹೇಳಿದರು ಅಲ್ಲಿನ ಅಧಿಕಾರಿಗಳು. ಅಷ್ಟೇ ಸಾಲದೆಂದು ಆತ, ಇಲ್ಲಿಗೆ ಪತ್ರ ಬರೆದಿದ್ದಾನೆ. ನಮ್ಮ ಕ್ಷೇತ್ರದ ಶಾಸಕರು ಬಂದಿದ್ದರು ; ಅವರಿಗೆ ಪ್ಲೈ-ವುಡ್‌ಗೆ ಲೈಸೆನ್ಸ್ ಕೊಡಬೇಕೆಂದು ರೆಕ್ಮಂಡೇಷನ್ ಮಾಡಿದಾನೆ. ಯಾರು ಬರೆಸಿದರು, ಎಲ್ಲಿಂದ ಬರೆಸಿದರು ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ ಎಂಪೋ ಕಾರ್ಖಾನೆಯವರಿಗಾಗಿ ಕಡಿದ ಜಾಗದಲ್ಲಿ ಎಷ್ಟು ಮರಗಳನ್ನು ಅವರು ನೆಟ್ಟಿದ್ದಾರೆ ? ಅಥವಾ ಅರಣ್ಯಾಧಿಕಾರಿಗಳು ಎಷ್ಟು ಮರಗಳನ್ನು ನೆಡಸಿದ್ದಾರೆ ? ಏಕೆಂದರೆ, ಆಗುಂಬೆ ಕಾಡಿನಲ್ಲಿ ಹಿಂದೆ ೩೫೦–೪೨೦ ಇಂಚು ಮಳೆಯಾಗುತ್ತಿತ್ತು. ಈ ಸಲ ೨೬೦ ಇಂಚು ಮಳೆಯಾಗಿದೆ. ಅದನ್ನು ನೋಡಿದಾಗ, ನಿಜವಾಗಿ ನಾವು ''ಬಯಲು ಸೀಮೆ''ಯಲ್ಲಿದ್ದವರಂತೆಯೇ ಇದ್ದೇವೆ. ಅಂಥಾ ಸ್ಥಿತಿಯನ್ನು ನಾವು ಅನುಭವಿಸುತ್ತಿದ್ದೇವೆ. ಆದುದರಿಂದ, ದೊಡ್ಡ ದೊಡ್ಡವರಿಗೆ ಮರಗಳನ್ನು ಕಡಿಯುವುದಕ್ಕೆ ಅವಕಾಶ ಕೊಟ್ಟಿದ್ದೀರಲ್ಲಾ, ಅವರಿಗೆ, ಎಷ್ಟು ಮರಗಳನ್ನು ಕಡಿಯುತ್ತಿರೋ ಅಷ್ಟು ಮರಗಳನ್ನು ನೆಡುವಂತೆ ಆದೇಶ ಕೊಟ್ಟು, ''ಕಡಿದ ಮರದ ಬಳಿ ಇನ್ನೊಂದು ಮರವನ್ನು ನೆಡಿ ; ಇಲ್ಲದಿದ್ದರೆ ಹಾಗೆಯೇ ನಡಿ'' ಎನ್ನುವ ಕ್ರಮವನ್ನು ತೆಗೆದುಕೊಳ್ಳಿ.

"Recovery of expenditure on failure to comply with order for planting trees The Tree Officer may take necessary action himself and recover the expenditure incurred therefor from the owner or the occupier, as the case may be. If such expenditure is not paid within the time specified by the Tree Officer, the amount along with interest at six per cent per annum and other expense, if any, shall be recovered as if it were an arrear of land revenue''.

ಈ ಆದೇಶದ ಪ್ರಕಾರ, ಕಡಿದ ಜಾಗದಲ್ಲಿ ಮತ್ತೊಂದು ಮರವನ್ನು ನೆಡಲಾಗಲಿಲ್ಲ ಎಂದರೆ, ಭೂ ಕಂದಾಯ ವಸೂಲಾತಿ ಮಾಡಿದ ಹಾಗೆ, ಅವನ ಹತ್ತಿರ ಹೋಗಿ ದಂಡ ವಸೂಲಿ ಮಾಡುವುದಕ್ಕೆ ಮರಾಧಿಕಾರಿಗೆ ಅಧಿಕಾರ ಕೊಡುತ್ತಿದ್ದಾರೆ. ಈಗ ಏನೂ ಇಲ್ಲದೆ ದಂಡ ವಸೂಲು ಮಾಡುತ್ತಿದ್ದಾರೆ; ಅದೇನೂ ನಿಮ್ಮ ಖಜಾನೆಗೆ ಬರುವುದಿಲ್ಲ; ಅದು ಬೇರೆ ವಿಷಯ. ಹೀಗೆ ಮರಾಧಿಕಾರಿಗಳ ಕೈಗೆ ಅಧಿಕಾರ ಕೊಟ್ಟುಬಿಟ್ಟರೆ, 'ಮಂಗನ ಕೈಗೆ ಭಂಗಿ ಕುಡಿಸಿ ಬ್ರಹ್ಮಾಸ್ತ್ರ ಕೊಟ್ಟಂತಾಗುತ್ತದೆ''.

ಹಾಗೆಯೇ ಇವತ್ತು ಈ ಅಧಿಕಾರವನ್ನು ಕೊಟ್ಟರೆ ನಮ್ಮ ಹಳ್ಳಿಗಳ ಗತಿ ಮುಗಿಯಿತು. ಈ ಅಧಿಕಾರವನ್ನು ಅಧಿಕಾರಿಗಳು ದೊಡ್ಡವರ ಮೇಲೆ ಉಪಯೋಗಿಸುತ್ತಾರೆಂದು ತಾವು ತಿಳಿದುಕೊಂಡಿದ್ದೀರಾ, ಇಲ್ಲ ದೊಡ್ಡವರ ಬಗ್ಗೆ ಇವರು ಉಪಯೋಗಿಸುವುದಿಲ್ಲ ನನ್ನಂಥ ಪರದೇಶಿಯ ಮೇಲೆ ಇವರು ಉಪ ಯೋಗಿಸುತ್ತಾರೆ ಆಗ ಏನು ಮಾಡುತ್ತೀರಿ ? ಇದನ್ನು ನಾವು ಯಾರ ಹತಿ ರ ಹೇಳುವುದು ? ಎಲ್ಲಿಹೋಗಿ ಹೇಳಿಕೊಳ್ಳುವುದು ? ನಾವು ಏನೂ ಮಾಡುವ ಹಾಗಿಲ್ಲ. ನಿಸ್ತೇಜಿತರಾಗಿ, ನಿರ್ವೀರ್ಯರಾಗಿ ನಾವು ನೆಲ ಹಿಡಿದು ಕೂತಿದ್ದೇವೆ. ಇಲ್ಲಿ ಲ್ಯಾಂಡ್ ಹೋಲ್ಡರ್ಸ್ ಎಂದರೆ, ಲ್ಯಾಂಡ್—ಹೋಲ್ಡರ್ಸ್, ನೆಲ ಹಿಡಿದವರು. ಇದನ್ನೂ ಕೂಡ ತಾವು ವಿಚಾರ ಮಾಡಬೇಕು. ಇನಕಂ ಟ್ಯಾಕ್ಸ್ ಕೊಡದೆ ಇರುವವರಿಂದ, ಹೇಗೆ ಟ್ಯಾಕ್ಸ್‌ನ್ನು ವಸೂಲು ಮಾಡಿದ್ದೀರಿ ? ೧೦ ವರ್ಷಗಳಿಂದಲೂ ಇನಕಂ ಟ್ಯಾಕ್ಸ್ ಕೊಡದೆ ಅಧಿಕಾರ ಗದ್ದುಗೆಯಲ್ಲಿ ಇರುವವರು ಇಲ್ಲವೇ ? ಅವರ ಹತ್ತಿರ ನೀವು ಇನಕಂ ಟ್ಯಾಕ್ಸನ್ನು ವಸೂಲು ಮಾಡಿದ್ದಿರಾ? ನಮ್ಮಂಥ ಪರದೇಶಿಗಳ ಹತ್ತಿರ ಬರುತ್ತೀರಿ.

ಇನ್ನು ಪೆನಾಲ್ಟೀಸ್, ಪ್ರೊಸೀಜರ್, ಮತ್ತು ಸೀಸರ್ಸ್ ಆಫ್ ಪ್ರಾಪರ್ಟಿ

"Where the Tree Officer has reason to believe that an offence under this Act is committed in respect of any tree, he may sieze the tools and any boats vehicles or other conveyances or animals used for the commission of the said offence along with the tree or part thereof which has been sever ed from the ground or the trunk, as the case may be".

ಇದು ತಾವು ಸೀಸ್ ಮಾಡುವ ಕ್ರಮ. ಯಾರು ಮರಗಳನ್ನು ಕಡಿಯುತ್ತಾರೋ ಅವರು ಉಪಯೋಗಿಸಿದ ವಸ್ತುಗಳನ್ನು ಸೀಸ್ ಮಾಡುತ್ತೀರಿ. ಯಾರೋ ಒಬ್ಬ ಕಟ್ಟಿಗೆ ತರಲಿಕ್ಕೆ ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡಿದ್ದಾನೆಂದು ತೆಗೆದುಕೊಳ್ಳಿ. ಅವರ ಗಾಡಿಯನ್ನು ತಾವು ಸೀಸ್ ಮಾಡಿದರೆ ಹೇಗೆ? ಲಾರಿಯಲ್ಲಿ ಕದ್ದುಕೊಂಡು ಕಾರಿನಲ್ಲಿ ಗಂಧದ ತುಂಡನ್ನು ಸ್ಮಗಲ್ ಮಾಡಿಸುತ್ತಾರಲ್ಲ ಅವರನ್ನು ನಾವು ಹಿಡಿಯುತ್ತೀರಾ ? ಯಾರಿಗೆ ಗಾಡಿಯಿಲ್ಲ. ಮನೆಯಿಲ್ಲ, ಭೂಮಿಯಿಲ್ಲ. ಅಂಥವರು ಮಳೆಗಾಲದಲ್ಲಿ ಕಟ್ಟಿಗೆ ತರುವುದಕ್ಕೆ ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡು ಹೋದರೆ ಅಂಥವರನ್ನು ಹಿಡಿದು ದಂಡಿಸು ತ್ತೀರಿ. ಅವನ ಗತಿ ಏನಾಗಬೇಕು, ಇದನ್ನು ತಾವು ಸ್ವಲ್ಪ ವಿಚಾರ ಮಾಡಬೇಕು

"Power to arrest without warrant : (1) Any Tree Officer may arrest without warrant any person reasonably suspected of having been concerned in any offence under this Act. if such person refuses to give his name and residence or gives a name or residence which the Tree Officer has reason to believe is false or if he has reason to believe that the person will abscond".

ಕಳ್ಳ ನಾಟ, ಸಂಳ್ಳು ಗಂಧ ಕಾರಿನಲ್ಲಿ ಸ್ಕೂಟರಿನಲ್ಲಿ ಹೋಗುತ್ತದೆ ಎಂದು ಹೇಳಿದರೆ, ಕಾರು ಸ್ಕೂಟರನ್ನು ಹಿಡಿಯುವುದನ್ನು ಬಿಟ್ಟು ಯಾರು ಇವರಿಗೆ ಸೂಚನೆ ಕೊಡುತ್ತಾರೋ ಅವನನ್ನು ಮೊದಲು ಹಿಡಿಯುತ್ತಾರೆ. ಇದನ್ನೂ ತಾವು ಸ್ವಲ್ಪ ವಿಚಾರ ಮಾಡಬೇಕು. ಇದನ್ನು ಅಧಿಕಾರಿಗಳು ಮಿಸ್ ಇಂಟರ್‌ಪ್ರಿಟ್ ಮಾಡಿ ನಾನು ಲಿಂಗಪ್ಪ ಎಂದು ಹೇಳಿದರೂ, ಅಲ್ಲ ಅವರು ಎಂ. ಎಸ್ ಕೃಷ್ಣನ್ ಎಂದು ಹೇಳಿ ಹಿಂಸೆ ಕೊಡುವ ನಿದರ್ಶನಗಳ ಅನುಭವ ನಮಗೆ ಇದೆ. ನಿಜಸ್ಥಿತಿಯನ್ನು ಮರೆಮಾಚಿ ಕಿರುಕುಳ ಕೊಟ್ಟಿರತಕ್ಕ ಪರಿಚಯ ನಮಗೆ ಇದೆ. ಇದನ್ನು ತಾವು ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಪ್ರಾರ್ಥಿಸುತ್ತೇನೆ.

ಅನಂತರ, ಅರೆಸ್ಟ್ ಆದ ೨೪ ಗಂಟೆಯೊಳಗೆ ಅರೆಸ್ಟ್ ಆದವರನ್ನು ಮ್ಯಾಜಿಸ್ಟ್ರೇಟ್ ಅವರ ಮುಂದೆ ನಿಲ್ಲಿಸಬೇಕು ಎಂದು ಇದೆ. ೨೪ ಗಂಟೆಯಲ್ಲ. ೨೪ ದಿವಸದವರೆಗೆ ಮ್ಯಾಜಿಸ್ಟ್ರೇಟರ್ ಅವರ ಮುಂದೆ ನಿಲ್ಲಿಸದೆ ಇರತಕ್ಕ ಸನಿ ವೇಶಗಳು ನಮ್ಮ ಮುಂದೆ ಇವೆ. ಅರೆಸ್ಟ್ ಆದಂಥವರು ಇಲ್ಲಿಗೆ ಬಂದು ಮುಖ್ಯ ಮಂತ್ರಿಗಳನ್ನೋ ಸಂಬಂಧಪಟ್ಟ ಮಂತ್ರಿಗಳನ್ನೋ ಹಿಡಿದು ಕಡೆಯ ಎರಡು ಗಂಟೆಯಲ್ಲಿ ಮ್ಯಾಜಿಸ್ಟ್ರೇಟರ್ ಅವರ ಮುಂದೆ ಹಾಜರ್ಪಡಿಸಿದಂಥಾದ್ದು ನಮ್ಮ ಹತ್ತಿರ ಇದೆ, ಇದನ್ನೆಲ್ಲಾ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

"Power to Compound Offences: (1) The State Government may, by order, empower a Tree Officer :

(a) to compound on payment of a sum not exceeding five thousand rupees any offence under this Act".

ಐದು ಸಾವಿರ ರೂಪಾಯಿಗಳವರೆಗೆ ಏಕೆ ? ಹೆಚ್ಚಾಗಿ ಏಕೆ ಇದು ಆಗಬಾರದು ? ಐದು ಅಡಿ ಉದ್ದದ ರೋಸ್ ಉಡ್ ಟಿಂಬರ್ ಸುಮಾರು ೧೦ ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ ಬೆಲೆಯುಂಟು. ಇಂಥಾದ್ದು ಬೇಕಾದಷ್ಟು ಸ್ಮಗಲ್ ಆಗುವಾಗ ಕೇವಲ ಐದು ಸಾವಿರ ರೂಪಾಯಿಗಳನ್ನು ಏಕೆ ಕಾಂಪೌಂಡ್ ಆನ್ ಪೇಮೆಂಟ್ ಎಂದು ಹಾಕಬೇಕು ? ಇಂಥವರಿಂದ ಸರಿಯಾಗಿ ತೆಗೆದುಕೊಳ್ಳಿ, ಇವರ ಆಸ್ತಿಯನ್ನು ಬೇಕಾದರೆ ಕಾನ್‌ಫಿಸ್ಕೇಟ್ ಮಾಡಿಕೊಳ್ಳಿ, ಕಾಡನ್ನು ಕಡಿದು ಹೊಟ್ಟೆ ಬೆಳೆಸಿದ್ದಾರಲ್ಲ ಅವರ ಆಸ್ತಿಯನ್ನು ಎಷ್ಟು ಬೇಕಾದರೂ ಕಾನ್‌ಫಿಸ್ಕೇಟ್ ಮಾಡಿಕೊಳ್ಳಿ ನಮ್ಮ ಅಭ್ಯಂತರವಿಲ್ಲ.

Indemnity : 'No suit, prosecution or other legal proceedings shall lie against any Officer for anything done or ommitted to be done by him in good faith under this Act or the rules or orders made thereunder ;

ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳು ಮಾಡತಕ್ಕಂಥ ಭ್ರಷ್ಟಾಚಾರವನ್ನು ಮುಚ್ಚಿಕೊಂಡು ಬಡವರ ಮೇಲೆ ಆರೋಪಗಳನ್ನು ಹೊರಿಸತಕ್ಕಂಥ ಸನ್ನಾಹ ಮಾಡುತ್ತಿದ್ದಾರೆ. ಇದನ್ನು ತಾವು ಗಮನಿಸಿದರೆ ಅಧಿಕಾರಿಗಳು ತಮ್ಮ ತಮ್ಮ ರಕ್ಷಣೆ ಮಾಡಿಕೊಳ್ಳುವ ಉದ್ದೇಶದಿಂದ ಈ ವಿಧೇಯಕವನ್ನು ತಂದು ರಾಜ್ಯದ ಜನರಿಗೆ ತೊಂದರೆಯನ್ನು ಕೊಡುವುದಕ್ಕೆ ಈ ಮೂಲಕ ಪ್ರಯತ್ನವನ್ನು ನಡೆಸಿದ್ದಾರೆ. ನಾವು ಎಷ್ಟೋ ಸಾರಿ ಸಾಕ್ಷಿ ಆಧಾರಗಳನ್ನು ಇಟ್ಟುಕೊಂಡು, ಟೇಪ್ ರಿಕಾರ್ಡು ಮಾಡಿ ಇಂಥಿಂಥ ರೇಂಜರ್ ಹೇಳಿಕೊಟ್ಟು ಮರಗಳನ್ನು ಕಡಿಸಿದ್ದಾರೆ : ಎಂದು ಹೇಳಿದರೂ ಸಹ ಅವರನ್ನು ತಾವು ಶಿಕ್ಷಿಸದೆ ರಕ್ಷಣೆ ಕೊಟ್ಟಿದ್ದೀರಿ. ಅಧಿಕಾರಿಗಳ ಮೇಲೆ ಸರ್ಕಾರದವರು ಏನೂ ಮಾಡುವ ಹಾಗಿಲ್ಲ. ಇಷ್ಟು ಹೇಳಿದರೆ ಸಾಕು ಎಂದು ಕಾಣುತ್ತದೆ. ಇದರ ಅಂತರ್ಯ ಜೀವಜೀವಾಳ ಏನು ಇದೆ ಎನ್ನುವುದನ್ನು ತಾವು ಮನಗಂಡರೆ ನಾನು ಹೇಳಿದ್ದು ಸಾರ್ಥಕ.

In Clause 25. Investing Tree Officer with certain powers :

ಇದನ್ನು ತಾವು ನೋಡಿದರೆ ಬಹುಶಃ ಸರ್ವಾಧಿಕಾರ ಇರತಕ್ಕ ರಾಷ್ಟ್ರದಲ್ಲಿಯೂ ಸಹ ಇಂಥ ಪವರ್ಸ್ ಅನ್ನು ಒಬ್ಬ ಅಧಿಕಾರಿಗೆ ಕೊಡುವುದು ಒಳ್ಳೆಯದಲ್ಲವೆಂದು ಗೊತ್ತಾಗಿದೆ. ಇಲ್ಲಿಯೂ ಸರ್ವಾಧಿಕಾರ ಇದೆ, ಇಂಥ ಪವರ್ಸ್ ಅನ್ನು ಒಬ್ಬ ಅಧಿಕಾರಿಗೆ ಕೊಡುವುದು ಜನರ ಎದೆ ಹೊಡೆಸತಕ್ಕ ವಿಷಯ. ಈ ಅಧಿಕಾರಿಗಳಿಗೆ ಕೊಡತಕ್ಕ ಅಧಿಕಾರ ಏನು ಎಂಬುದನ್ನು ನೋಡಿ.

Clauce 25—INVESTING TREE OFFICERS WITH CERTAIN POWERS :

(a) power to enter upon any land and to survey, demarcate and make a map of the same;

(b) powers of a Civil Court to compel the attendance of witnesses and the production of documents and material objects ;

(c) power to issue a search warrant under the Code of Criminal Procedure, 1973 ;

(d) power to held inquiries into offences under the Act and in the course of such inquiry to receive and record evidence ;

(e) power to take possession of property under the Act;

(f) power to direct release of property or withdrawal of charge

(g) power to insist any person to plant tree or trees of suitable species in adequate numbers on any land owned or occupied by him.

5-30 P. M.

ಆದುದರಿಂದ ಇದನ್ನು ಸ್ವಲ್ಪ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ ಭೂಮಿ ಇಲ್ಲದೇ ಇದ್ದವರಿಗೂ ಕೂಡ ಮರ ನೆಡು ಎಂದರೆ ಅಪಾಯ. ಇಷ್ಟು ಮಾತುಗಳನ್ನು ಹೇಳುತ್ತಾ ಕೊನೆಯದಾಗಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಹೋದ ವರ್ಷದ ಬಡ್ಜೆಟ್ ಭಾಷಣ ದಲ್ಲೂ ಕೂಡ ಹೇಳಿದ್ದೇನೆ. ಆಗ ಬೇರೆ ಒಬ್ಬರು ಕಾಡು ಮಂತ್ರಿಗಳು ಇದ್ದರು ಅವರು ಈಗ ಕಾರ್ಮಿಕ ಮಂತ್ರಿಗಳಾಗಿದ್ದಾರೆ ಸಂತೋಷ ಈಗ ಹೊಸದಾಗಿ ಈ ಅರಣ್ಯ ಮಂತ್ರಿಗಳು ಬಂದು ಈಗ ಅರಣ್ಯ ಪ್ರವೇಶ ಮಾಡಿದ್ದಾರೆ. ಅವರಿಗೂ ನನ್ನ ಸ್ವಾಗತ. ಏತಕ್ಕೆಂದರೆ ಅವರೂ ಕೂಡ ಹಾಸನದವರು. ಅರೆ ಮಲೆನಾಡಿನ ಪ್ರದೇಶದವರು. ಆದುದರಿಂದ ಅವರಿಗೂ ಕೂಡ ಮಲೆನಾಡಿನ ಬಗ್ಗೆ ಸ್ವಲ್ಪ ಗೊತ್ತಿರಬಹುದು ಆದರೆ ಅವರು ಉತ್ತರ ಕೊಡುವಾಗ ಕಾಡು ಎಂದರೆ ಏನು ಅನ್ನುವುದಕ್ಕೆ ಡೆಫನೆಷನ್ ಹೇಳಬೇಕು. ಕಾಡು ಎಂದರೆ ಏನು, ಕುರುಚಲು ಗಿಡ ಎಂದರೆ ಏನು ಅನ್ನುವುದಕ್ಕೆ ಅವರು ಡೆಫನೆಷನ್ ತಿಳಿದರೆ ಅವರು ಕಾಡನ್ನು ಸಂರಕ್ಷಣೆ ಮಾಡಬಹುದು ಅಂತ ನಾವು ಹೇಳುವುದಕ್ಕೆ ಅಡ್ಡಿ ಇಲ್ಲ. ವನ್ಯ ಸಂರಕ್ಷಣೆ ಮಾಡಬೇಕು, ಸಸ್ಯ ಸಂರಕ್ಷಣೆ ಮಾಡಬೇಕು ಎಂದು ಏನು ಹೇಳುತ್ತಾರೋ ಅದು ಭಕ್ಷಣೆ ಆಗುತ್ತದೆ. ಇದರ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದೇನೆ. ಆದರೂ ಕೂಡ ಅವರು ಹೋಗತಕ್ಕಂಥಾ ಹೆಜ್ಜೆ ಏನು ಇದೆ ಅದು ದಿಟ್ಟತನ ವಾದ ಹೆಜ್ಜೆಯಾಗಿರಲಿ ನಿತ್ಯ ಸುಮಂಗಲಿಯಂತೆ ಆಗಬೇಡಿ ಈವಾಗ ಈ ವಿಧೇಯಕವನ್ನು ಹಾಗೆಯೇ ಪಾಸು ಮಾಡುವುದಾದರೆ ತಾವು ದಯವಿಟ್ಟು ತಮ್ಮ ಕ್ಷೇತ್ರಕ್ಕೆ ಬಂದು ಚುನಾವಣೆಗೆ ನಿಲ್ಲಲಿ. ಇನ್ನು ಮೇಲೆ ಚುನಾವಣೆ ಇದೆಯೋ ಇಲ್ಲವೋ ? ಚುನಾವಣೆ ಆದರೆ ಅವರು ರಾಜೀನಾಮೆಯಾದರೂ ಕೊಟ್ಟು ಬಂದು ನಿಲ್ಲಲಿ. ಯಾರು ಗೆಲ್ಲುತ್ತಾರೋ ನೋಡೋಣ. ಹಿಂದೆ ಈ ಅರಣ್ಯ ಖಾತೆಗೆ ಶ್ರೀಮಾನ್ ಕೆ. ಹೆಚ್. ಪಾಟೀಲರು, ಮುಂತಾದವರು ಇದ್ದರು ಈವೊತ್ತು ಶ್ರೀಮಾನ್ ಶ್ರೀಕಂಠಯ್ಯನವರು ಬಂದಿದ್ದಾರೆ. ಯಾರಿಗೆ ಈ ಅರಣ್ಯ ಖಾತೆಯಲ್ಲಿ ಮಾಹಿತಿ ಇಲ್ಲವೋ ಅಂಥಾವರನ್ನೇ ಹಾಕಿದ್ದಾರೆ. ಆದರೂ ಕೂಡ ನಾನು ಹೇಳುವುದು ಇಷ್ಟೆ. ಹೇಗಾದರೂ ಮಾಡಿ ಈ ಕಾಡನ್ನು ಬೆಳೆಸಲಿ ಮತ್ತು ಉಳಿಸಲಿ ಮತ್ತು ಶ್ರೀಮಾನ್ ಕೊಡಗಿಯವರು ಈ ಬಗ್ಗೆ ಏನು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಅದಕ್ಕೆ ತಿದ್ದುಪಡಿಗಳನ್ನು ತಂದು ತಮ್ಮ ತಪ್ಪನ್ನೂ ಕೂಡ ತಿದ್ದಿಕೊಳ್ಳಬೇಕು ಎಂದು ನಾನು ತಮ್ಮನ್ನು ಪ್ರಾರ್ಥಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. (ಹೊಸನಗರ)— ಸನ್ಮಾನ್ಯ ಸಭಾಧ್ಯಕ್ಷರೇ, ತಾವು ಸಂಕ್ಷಿಪ್ತವಾಗಿ ಇದರ ಬಗ್ಗೆ ಮಾತನಾಡಬೇಕು ಎಂದು ಅಪ್ಪಣೆ ಕೊಟ್ಟಿರುವುದರಿಂದ ನಾನು ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈವೊತ್ತು ಅರಣ್ಯ ಮಂತ್ರಿ ಗಳು ಈ ಬಗ್ಗೆ ಏನೊಂದು ಶಾಸನವನ್ನು ತಂದಿದ್ದಾರೆ ಮತ್ತು ಆಗಾಗ್ಗೆ ಇದರ ಬಗ್ಗೆ ಬಂದಿರ ತಕ್ಕಂಥಾ ಶಾಸನಗಳು ಏನು ಇವೆ ಅವೆಲ್ಲವೂ ಸ್ವಾಗತಾರ್ಹವಾದದ್ದು ಎಂದು ಹೇಳುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆದರೆ ಅದರಲ್ಲಿರತಕ್ಕಂಥಾ ಕೆಲವು ಕ್ಲಾಸ್ ಏನು ಇವೆ ಕ್ಲಾಸಸ್ 6 ಮತ್ತು 9ರಲ್ಲಿ ಹಾಕಿರ ತಕ್ಕಂಥಾ ಕಟ್ಟುಪಾಟುಗಳನ್ನು ನೋಡಿದರೆ ನಮ್ಮ ಮಲೆನಾಡಿನ ಜನಕ್ಕೆ ಬಹಳ ಕಷ್ಟವಾಗುತ್ತದೆ ಎನ್ನುವುದನ್ನು ನಮ್ಮ ರಾಜ್ಯದ ಅರಣ್ಯ ಮಂತ್ರಿಗಳುಅರ್ಥ ಮಾಡಿ ಕೊಳ್ಳಬೇಕು ಎಂದು ನಾನು ಅರಿಕೆ ಮಾಡಿ ಕೊಳ್ಳುತ್ತೇನೆ, ಈಗಾಗಲೇ ಇರತಕ್ಕಂಥಾ ಶಾಸನ ದಲ್ಲಿ ಪ್ರತಿ ದಿವಸವೂ ಕೂಡ ಅರಣ್ಯ ಅಧಿಕಾರಿಗಳ ಜೊತೆಗೆ ಸಾಮಾನ್ಯ ಜನರ ಘರ್ಷಣೆ ಆಗುತ್ತಿದೆ. ವಾರದಲ್ಲಿ 2 ದಿವಸವೂ ಕೂಡ ಘರ್ಷಣೆ ನಡೆಯುತ್ತಾ ಇದೆ. ಒಂದು ಬೀಟೆ ಮರ ಕಡಿದರೆ ಅದಕ್ಕೆ

ಶಿಕ್ಷೆ ಇರುತ್ತದೆ. ಒಂದು ಬರಳು ಕಾಡಿನಿಂದ ತಂದರೆ ಅದಕ್ಕೆ ಶಿಕ್ಷೆ ಇರುತ್ತದೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ ಬಹು ಜನರ ಬೇಡಿಕೆ ಈ ರೀತಿಯಾಗಿಯೇ ಇದೆ. ನಮ್ಮ ಜಿಲ್ಲೆಯಲ್ಲಿ ಬಹಳ ಜನಕ್ಕೆ ಕಷ್ಟವಾಗಿದೆ. ನಮಗೆ ಹಿಂದೆ ಈ ಬಗ್ಗೆ ಏನೇನು ಸೌಲಭ್ಯಗಳು ಇತ್ತೋ ಅವೆಲ್ಲವೂ ಕೂಡ ನಮ್ಮ ಮಲೆ ನಾಡಿನ ಜನರಿಗೆ ಈಗ ದೊರಕುತ್ತಾ ಇಲ್ಲ. ನಮಗೆ ರಕ್ಷಣೆ ಕೊಡಬೇಕು ಅನ್ನುವ ಕೋರಿಕೆಯನ್ನು ಅವರ ಮುಂದೆ ಇಟ್ಟಿದ್ದಾರೆ. ನಾನು ಇತ್ತೀಚೆಗೆ ಒಂದು ಪುಸ್ತಕವನ್ನು ಓದಿದೆ. ಅನಿಬಸೆಂಟ್ ಅನ್ನುವ ಒಬ್ಬ ವ್ಯಕ್ತಿ ಇಂಡಿಯಾ ಆನ್ ದಿ ರೋಡ್ ಆಫ್ ಫ್ರೀಡಂ... ಅನ್ನುವ ಒಂದು ಪುಸ್ತಕ ಬರೆದಿದ್ದಾನೆ. ಆ ಪುಸ್ತಕದಲ್ಲಿ ೧೮೮೫ ರಿಂದ ೧೯೦೦ ರವರೆಗೂ ಕೂಡ ನಮ್ಮ ನೂತನ ಕಾಂಗ್ರೆಸ್‌ನ ಸಮ್ಮೇಳನ ಏನು ನಡೆದಿತ್ತು ಆ ಬಗ್ಗೆ ಒಂದು ಸಿದ್ಧಾಂತ ಬರೆದಿದ್ದಾನೆ. ಪ್ರತಿಯೊಂದು ಸಂದರ್ಭದಲ್ಲೂ ಕೂಡ ಬ್ರಿಟಿಷರು ಅರಣ್ಯ ಶಾಸನದ ಬಗ್ಗೆ ಏನು ಒಂದು ತೀರ್ಮಾನ ಕೈಗೊಂಡಿದ್ದರು ಅದನ್ನು ನೋಡಿದರೆ ಇಂಥಾ ಒಂದು ಅರಣ್ಯ ಶಾಸನ ಬಗ್ಗೆ ಏನು ಆಗಂತ್ತಾ ಇದೆ, ಅನ್ನುವುದನ್ನು ನೋಡಿದರೆ ಇಷ್ಟು ಅತಿಕ್ರಮ ಪ್ರವೇಶ ಹಿಂದೆ ಎಂದೂ ಇರಲಿಲ್ಲ ಅನ್ನುವುದನ್ನು ಅವರು ಹೇಳಿಕೊಂಡು ಬಂದಿದ್ದಾರೆ ಅದಕ್ಕೆ ಕಾರಣಗಳನ್ನೂ ಸಹ ಕೊಡುತ್ತಾರೆ. ಈ ಸ್ವತಂತ್ರ ಭಾರತದಲ್ಲಿ ಸಾಮಾನ್ಯ ಜನ ಏನು ಒಂದು ಸೌಲಭ್ಯವನ್ನು ಅನುಭವಿಸಿಕೊಂಡು ಬರಬೇಕಾಗಿತ್ತೋ ಅದು ಆಗದೆ ಈಗ ಅವರಿಗೆ ಬಹಳ ಕಷ್ಟವಾಗಿದೆ ಈವೊತ್ತು ಸ್ವತಂತ್ರ ಭಾರತ ಬಂದರೂ ಕೂಡ ಅದರಲ್ಲೂ ನಮ್ಮ ಕಾಂಗ್ರೆಸ್ ಪಕ್ಷ ಸರ್ಕಾರ ಇದ್ದರೂ ಕೂಡ ಇಷ್ಟೊಂದು ಜಟಿಲವಾದ ಸಮಸ್ಯೆಯನ್ನು ಈ ಒಂದು ಕಾನೂನಿನಲ್ಲಿ ಅಳವಡಿಸಿದರೆ ನಮ್ಮ ಜನರಿಗೆ ಬಹಳ ತೊಂದರೆಯಾಗುತ್ತದೋ ಏನೋ ಎಂದು ನನ್ನ ಅರ್ಥ. ಈವೊತ್ತು ಒಬ್ಬ ಸಾಮಾನ್ಯ ಅಧಿಕಾರಿಗೆ ಸ್ವಂತ ಖಾಸಗೀ ಜಮೀನಿನಲ್ಲಿ ಮರ ಗಿಡ ಕಡಿದಿದ್ದರೆ ಅವನಿಗೆ ಹೇಳಬೇಕು. ಇಂಥಾ ಒಂದು ಜಟಿಲವಾದ ಶಾಸನ ಮಾಡಿದರೆ ನಾಳೆ ಇದರ ಪರಿಣಾಮ ಏನಾಗಬಹುದು ಅನ್ನುವುದನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಇದು ವಾಸ್ತವವಾದ ವಿಚಾರ. ಪ್ರತಿದಿವಸದಲ್ಲೂ ಕೂಡ ನಾವು ದಿನಚರಿಯಲ್ಲಿ ಏನು ಅನುಸರಿಸುತ್ತಿದ್ದೇವೋ ಅದನ್ನು ಈವೊತ್ತು ಕಾರ್ಯಾಚರಣೆಗೆ ತರಬೇಕು ಎಂದು ಹೊರಟಿದ್ದೇವೆ ಈ ಬಗ್ಗೆ ಇನ್ನೂ ಒಂದು ದಿಟ್ಟ ಹೆಜ್ಜೆ ಇಟ್ಟು ಏನು ಒಂದು ಶಾಸನ ಮಾಡಿದ್ದೀರಿ ಹಾಗೆಯೇ ಇದರಲ್ಲಿರತಕ್ಕಂಥಾ ನ್ಯೂನತೆಗಳನ್ನೂ ಕೂಡ ಹೋಗಲಾಡಿಸಬೇಕು ಎಂದು ನಾನು ಆರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಹಿಂದಿನ ಸರ್ಕಾರದವರು ಮಾಡಿರತಕ್ಕಂಥಾ ಒಂದು ದೊಡ್ಡ ತಪ್ಪಿಗೆ ನಾವು ಈ ರೀತಿ ಒಂದು ಕಷ್ಟಕ್ಕೆ ಒಳಗಾಗಿದ್ದೇವೆ ನಮಗೆ ಒಂದು ಉದಾಹರಣೆ ಹೇಳುವುದಾದರೆ ಹರಿಹರ ಪಾಲಿಫೈಬರ್‌ಗೆ ಉಪಯೋಗವಾಗುವಂಥಾ ಎಲ್ಲಾ ಯೂಕಲಿಪ್ಟಸ್ ಮರಗಳನ್ನು ನಾವು ಬೆಳೆದುಕೊಡುತ್ತೇವೆ ಎಂದು ಒಂದು ಒಪ್ಪಂದ ಮಾಡಿಕೊಂಡರು ಅದರ ಪರಿಣಾಮವಾಗಿ ಮಲೆನಾಡಿನಲ್ಲಿರುವ ದಟ್ಟವಾದ ಅರಣ್ಯವೆಲ್ಲಾ ಹೋಯಿತು. ಅಲ್ಲೆಲ್ಲಾ ನೀಲಗಿರಿ ಮರವನ್ನು ನೆಟ್ಟರು ಕಾಡೆಲ್ಲಾ ಹೋಯಿತು ಅದಕ್ಕೆ ನಾನು ಹೇಳುವುದು ಏನೆಂದರ ರಾಜ ಮಹಾರಾಜರುಗಳಿಗೆ ರಾಜಧನವನ್ನು ಕೊಡಬೇಕಾಗಿರುವಂಥಾದ್ದನ್ನು ಹೇಗೆ ರದ್ದು ಮಾಡಿದರೋ ಅದೇರೀತಿಯಾಗಿ ಹಿಂದೆ ಇದಕ್ಕೆ ಆಗಿರತಕ್ಕಂಥಾ ಒಪ್ಪಂದವನ್ನು ಏತಕ್ಕೆ ರದ್ದು ಮಾಡಬಾರದು? ಈವಾಗ ಇದರಿಂದ ಬಹಳ ತೊಂದರೆಯಾಗುತ್ತಾ ಇದೆ ಎಲ್ಲಿನೋಡಿದರೆ ಅಲ್ಲಿ ನೀಲಗಿರಿ ಗಿಡಗಳು ನಾನು ಚಿಕ್ಕಂದಿನಲ್ಲಿ ನೋಡಿದಂಥಾದ್ದು ನಮ್ಮ ಶೀರನಹಳ್ಳಿಯಿಂದ ೬ ಮೈಲಿ ಪ್ರಾಂತದವರೆಗೂ ಕೂಡ ಎಲ್ಲಿ ನೋಡಿದರೆ ಅಲ್ಲಿ ಅರಣ್ಯ ಪ್ರದೇಶ ಇದ್ದಂಥಾ ಜಾಗ ಇವೊತ್ತು ಆ ಅರಣ್ಯವೆಲ್ಲಾ ಎಲ್ಲಿ ಹೋಯಿತೋ ಗೊತ್ತಿಲ್ಲ. ಅರಣ್ಯ ಎಲ್ಲಿಯೂ ಕಾಣುತ್ತಿಲ್ಲ ಆಗುಂಬೆ ಘಾಟ್‌ನಲ್ಲಿ ಸಹ ದಟ್ಟವಾದಂಥ ಅರಣ್ಯವಿತ್ತು ಇಂದು ಆ ಅರಣ್ಯವೆಲ್ಲಾ ತಿರುಪತಿ ತಿಮ್ಮಪ್ಪನಿಗೆ ಮುಡಿಪು ಕೊಟ್ಟಂತೆ ಆಗಿದೆ. ಈಗಲಾದರೂ ಸಹ ಸರ್ಕಾರದವರು ಹರಿಹರದ ಪಾಲಿಫೈಬರ್ಸ್‌ನವರೊಡನೆ ಏನು ಒಪ್ಪಂದ ಮಾಡಿಕೊಂಡಿದ್ದಾರೆ, ಅದನ್ನು ಪುನರ್‌ಪರಿಶೀಲನೆ ಮಾಡಿದರೆ ಅರಣ್ಯದ ರಕ್ಷಣೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈಗ ಏನು ಶಾಸನವನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ ಅದು ಮಾನ್ಯ ಸಂಜಯ ಗಾಂಧಿಯವರ ಅಭಿಪ್ರಾಯದಂತೆ ನಡೆಯುತ್ತದೆ ಪ್ರತಿಯೊಬ್ಬರೂ ಮರಗಿಡಗಳನ್ನು ನೆಡಬೇಕೆಂದು ಅವರು ಹೇಳಿದ್ದಾರೆ ಅವರ ಒಂದು ಕರೆಗೆ ಎಲ್ಲರೂ ಬೆಳೆಕೊಡಬೇಕು. ಈಗ ತಂದಿರುವಂತಹ ಶಾಸನ ಸ್ತುತ್ಯಾರ್ಹವಾಗಿದೆ ಆದಕಾರಣ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಮಲೆನಾಡಿನವರೇ ಆದಕಾರಣ ಅವರಿಗೆ ನಮ್ಮ ಕಷ್ಟ ಏನೆಂಬುದು ಅರ್ಥವಾಗುತ್ತದೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಫ್. ಪಾಟೀಲ್ (ಬ್ಯಾಡಗಿ).—ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಚರ್ಚೆ ಮಾಡುತ್ತಿರುವ ವಿಷಯ ಅರಣ್ಯ ಶಾಖೆಗೆ ಸಂಬಂಧಪಟ್ಟಿದ್ದು. ಮಾನವರು ಜೀವನ ಮಾಡುವುದಕ್ಕೆ ಮತ್ತು ಇತರೇ ಪ್ರಾಣಿಗಳು ಜೀವನ ಮಾಡುವುದಕ್ಕೆ ಈ ಅರಣ್ಯ ಸಂಪತ್ತು ಎಷ್ಟು ಅವಶ್ಯಕತೆ ಇದೆ ಎಂಬುದನ್ನು ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಮಾನ್ಯ ಲಿಂಗಪ್ಪನವರು ಹೇಳಿದಂತೆ ತಾತ್ವಿಕವಾಗಿ ನಮಗೆ ಅರಣ್ಯ ಬೇಕಾಗಿದೆ. ಈ ಅರಣ್ಯದ ರಕ್ಷಣೆ ಹಾಗೂ ಬೆಳವಣಿಗೆಯನ್ನು ಮಾನ್ಯ ಲಿಂಗಪ್ಪನವರು ತಾತ್ವಿಕವಾಗಿ ಒಪ್ಪಿಕೊಂಡರೂ ಸಹ ಸರ್ಕಾರದವರು ಈ ಅರಣ್ಯ ರಕ್ಷಣೆಯ ಬಗ್ಗೆ ಬಹಳ ಬಿಗುವಾದ ಪಾಲಿಸಿಯನ್ನು ತೆಗೆದುಕೊಂಡಿದ್ದರಿಂದ ಬಡವರಿಗೆ ಆಗುತ್ತಿರುವ ಕಷ್ಟನಷ್ಟಗಳ ಬಗ್ಗೆ ಅವರು ಹೇಳಿದ್ದಾರೆ. ಅವರ ಒಂದು ಅನುಭವದ ಮಾತುಗಳನ್ನು ನಾನು ಸುಳ್ಳು ಎಂದು ಹೇಳುವುದಿಲ್ಲ. ಅವರು ಹೇಳಿದ್ದರಲ್ಲಿ ಕೆಲಮಟ್ಟಿಗೆ ನಿಜ ಎಂದು ಹೇಳಬೇಕಾಗುತ್ತದೆ. ಆದರೆ ಅವರು ಹೇಳಿದ್ದರಲ್ಲಿ ಸ್ವಲ್ಪಮಟ್ಟಿಗೆ ಅತಿಶಯೋಕ್ತಿಯೂ ಇದೆಯೆಂದು ಹೇಳಬೇಕಾಗುತ್ತದೆ. ಅರಣ್ಯವೆಲ್ಲಾ ಹಾಳಾಗಿ ಹೋಗುತ್ತಿದ್ದ ಕಾರಣದಿಂದ ಸರ್ಕಾರದವರು ಇಂತಹ ಒಂದು ಬಿಗುವಾದ ಕಾರ್ಯಕ್ರಮ ಕೈಗೊಳ್ಳುವುದು ಅವಶ್ಯಕವಾಗಿತ್ತು. ಅರಣ್ಯವನ್ನು ತಮ್ಮ ಸ್ವಂತದ ಆಸ್ತಿ ಎಂಬುದಾಗಿ ತಿಳಿದುಕೊಂಡು ಕೆಲವರು ಮರಗಳನ್ನು ಸಿಕ್ಕಾಪಟ್ಟೆ ಕಡಿಯುತ್ತಿದ್ದ ಕಾರಣದಿಂದ, ಸರ್ಕಾರದವರು ಈ ರೀತಿಯ ಒಂದು ಕಾನೂನನ್ನು ತರಬೇಕಾಯಿತು. ಅರಣ್ಯವನ್ನು ರಾಷ್ಟ್ರೀಯ ಸ್ವತ್ತು ಎಂಬುದಾಗಿ ಎಲ್ಲರೂ ಪರಿಗಣಿಸಿದ್ದರೆ ಇಂತಹ ಕಾನೂನಿನ ಅವಶ್ಯಕತೆಯೇ ಇರಲಿಲ್ಲ. ಅರಣ್ಯ, ದೊಡ್ಡ ದೊಡ್ಡ ಪರ್ವತಗಳು, ನದಿಗಳು, ಕೊಳ್ಳಗಳು, ಇವುಗಳೆಲ್ಲಾ ರಾಷ್ಟ್ರೀಯ ಸ್ವತ್ತುಗಳಾಗಿವೆ. ಈ ಅರಣ್ಯದ ಅಭಿವೃದ್ಧಿಯಾಗದೇ ಮಾನವ ಜೀವನ ಸಾಗುವುದಿಲ್ಲವಾದ ಕಾರಣ ಈಗಿರತಕ್ಕಂಥ ಮರಗಿಡಗಳನ್ನು ಉಳಿಸಿಕೊಳ್ಳುವುದಕ್ಕೆ ಇಂತಹ ಯೋಗ್ಯವಾದ ಕಾನೂನುಗಳು ಅವಶ್ಯಕವಾಗಿ ಬೇಕಾಗುತ್ತವೆ. ಮತ್ತು ಇಂತಹ ಕಾನೂನುಗಳನ್ನು ತರಲೇಬೇಕಾದಂತಹ ಸ್ಥಿತಿಯೂ ಸಹ ಬಂದಿದೆ. ಇಂತಹ ಕಾನೂನುಗಳನ್ನು ತರದೆ ಅರಣ್ಯ ಉಳಿಯುವುದು ಶಕ್ಯವಿಲ್ಲ ಎಂಬಂಥ ಸ್ಥಿತಿಗೆ ನಾವು ಬಂದಿದ್ದೇವೆ. ಇದು ನಮ್ಮ ದುರ್ದೈವದ ಸಂಗತಿ ಎಂದು ಹೇಳಬೇಕಾಗಿದೆ. ನಮ್ಮ ಹವಾಮಾನ ಪರಿಸ್ಥಿತಿ ಒಂದೇ ಮಟ್ಟದಲ್ಲಿರಬೇಕಾದರೆ, ಮಳೆ ಬೆಳೆ ಚೆನ್ನಾಗಿ ಆಗಬೇಕಾದರೆ, ವ್ಯವಸಾಯದ ಅಭಿವೃದ್ಧಿಯಾಗಬೇಕಾಗಿದ್ದರೆ, ನೀರಾವರಿ ಸೌಕರ್ಯಗಳು ಮತ್ತು ವಿದ್ಯುಚ್ಛಕ್ತಿ ಸೌಲಭ್ಯಗಳು ಹೆಚ್ಚಾಗಬೇಕಾಗಿದ್ದರೆ ಅರಣ್ಯಗಳ ಅಭಿವೃದ್ಧಿ ಹೆಚ್ಚಾಗಿ ಆಗಬೇಕಾಗುತ್ತದೆ. ಅದಕ್ಕಾಗಿ ಮಲೆನಾಡು ಮತ್ತು ಬಯಲುಸೀಮೆಗಳಲ್ಲಿ ಹೆಚ್ಚುಹೆಚ್ಚಾಗಿ ಗಿಡಮರಗಳನ್ನು ಹಚ್ಚಬೇಕು. ಈ ಮಸೂದೆಯಿಂದ ಅನೇಕರಿಗೆ ಕಷ್ಟವಾಗುತ್ತದೆಂದು ಮಾನ್ಯ ಲಿಂಗಪ್ಪನವರು ಹೇಳಿದರು. ಆದರೆ ಮಾನ್ಯ ಮಂತ್ರಿಗಳೇ ಸರ್ಕಾರದ ವತಿಯಿಂದ ಕೆಲವು ತಿದ್ದುಪಡಿಗಳನ್ನು ಮಂಡಿಸುವವರಿದ್ದಾರೆ. ಆ ತಿದ್ದುಪಡಿಗಳ ಪ್ರಕಾರ ವ್ಯಕ್ತಿಗಳು ತಮ್ಮ ಸ್ವಂತ ಉಪಯೋಗಕ್ಕಾಗಿ ವರ್ಷವೊಂದಕ್ಕೆ ೨೦ ಸಿ.ಎಫ್.ಟಿ.ನಷ್ಟು ಟಿಂಬರನ್ನು ಮತ್ತು ಒಂದೂವರೆ ಟನ್‌ನಷ್ಟು ಕಟ್ಟಿಗೆಯನ್ನು ಅನುಮತಿಯಿಲ್ಲದೆ ಕಡಿದುಕೊಡುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಮಾನ್ಯ ಲಿಂಗಪ್ಪನವರು ಏನು ತಿದ್ದುಪಡಿಯನ್ನು ಕೊಟ್ಟಿದ್ದಾರೆ, ಅದನ್ನು ಅವರು ಹಿಂದಕ್ಕೆ ತೆಗೆದುಕೊಳ್ಳುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. ನಮ್ಮ ನಿಜ ಜೀವನದಲ್ಲಿ ನೂರಾರು ಉದ್ಯೋಗಗಳಿಗೆ ಈ ಮರಗಳ ಅವಶ್ಯಕತೆಯಿರುವುದರಿಂದ ಅನಾವಶ್ಯಕವಾಗಿ ಅವುಗಳನ್ನು ಕಡಿಯುವುದನ್ನು ನಿಲ್ಲಿಸಬೇಕಾಗಿದೆ. ನಮ್ಮ ನಿಜ ಜೀವನದ ಉಪಯೋಗಕ್ಕೆ ಅವು ಅತ್ಯಾವಶ್ಯಕವಾಗಿ ಬೇಕಾಗಿರುವುದರಿಂದ ಹೆಚ್ಚು ಹೆಚ್ಚು ಪ್ರಮಾಣದಿಂದ ಅರಣ್ಯ ಬೆಳೆಸುವುದು, ಗಿಡಗಳ ಸಂರಕ್ಷಣೆ ಮಾಡುವುದು ಅವಶ್ಯಕವಾಗಿದೆ. ಮಾನ್ಯ ಮಂತ್ರಿಗಳು ಹೇಳಿರುವ ಪ್ರಕಾರ ಹಳ್ಳಿಗಳಲ್ಲಿ ದಿನನಿತ್ಯದ ಉಪಯೋಗಕ್ಕಾಗಿ ಅರಣ್ಯವನ್ನು ಬೆಳೆಸುವುದು ಅತ್ಯಾವಶ್ಯಕವಾಗಿದೆ. ಮುಖ್ಯವಾಗಿ ಜನರಲ್ಲಿ ಮರಗಳನ್ನು ಬೆಳೆಸುವ ಪ್ರವೃತ್ತಿಯನ್ನು ಉಂಟು ಮಾಡಬೇಕು. ಜೊತೆಗೆ ವ್ಯವಸಾಯದ ಉಪಕರಣಗಳಿಗೆ ಬೇಕಾಗುವಂತಹ ಮತ್ತು ಮನೆಗಳನ್ನು ಕಟ್ಟಿಕೊಳ್ಳಲು ಬೇಕಾಗುವಂತಹ ಕಟ್ಟಿಗೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸುವುದು ಅವಶ್ಯವಿದೆ. ಮುಖ್ಯವಾಗಿ ಮಾನ್ಯ ಲಿಂಗಪ್ಪನವರ ಆತಂಕ, ಸಂಶಯ, ಅನುಮಾನ ಏನಿದೆ, ಅದೆಲ್ಲಾ ಮಾನ್ಯ ಸಚಿವರ ತಿದ್ದುಪಡಿಗಳಿಂದ ನಿವಾರಣೆಯಾಗುತ್ತದೆಂದು ನಾನು ತಿಳಿದಿದ್ದೇನೆ. ನಾವು ಅರಣ್ಯವನ್ನು ಬೆಳೆಸುವ ವಿಚಾರದಲ್ಲಿ ನಿಷ್ಠೆಯನ್ನು ತೋರಿಸಿದ್ದೇ ಆದರೆ ಇದೊಂದು ಅತ್ಯುತ್ತಮವಾದ ಕಾರ್ಯವಾಗುತ್ತದೆಂಬುದನ್ನು ಮಾನ್ಯ ಲಿಂಗಪ್ಪನವರೂ ಸಹ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಇಂತಹ ಕಾನೂನು ಮಾಡುವುದರಿಂದ ಜನರಲ್ಲಿ ಒಂದು ರೀತಿಯ ಅಂಜಿಕೆಯಾದರೂ ಇರುತ್ತದೆ. ಈ ಒಂದು ಆರ್ಡಿನೆನ್ಸ್‌ನ್ನು ಹೊರಡಿಸುವುದಕ್ಕೆ ಮೊದಲು ನ್ಯಾಷನಲ್ ಹೈ-ವೇನಲ್ಲಿ ಬೆಳೆದಿರುವ ಮರಗಳನ್ನು ಕೆಲವರು ಕ್ರೂರತನದಿಂದ ಕಡಿಯುತ್ತಿದ್ದುದನ್ನು ನಾವುಗಳು ಸುಮ್ಮನೆ ಕನಿಕರ ಬರುವ ರೀತಿಯಲ್ಲಿ ನೋಡಿಕೊಂಡು ಸುಮ್ಮನಿರುತ್ತಿದ್ದೆವು. ಅದನ್ನು

ತಡೆಯುವುದಕ್ಕೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳಿಗೂ ಸಹ ಕಟ್ಟುನಿಟ್ಟಿನ ಇಂತಹ ಆಜ್ಞೆಗಳು ಇರಲಿಲ್ಲ. ಯಾರು ಸಾರ್ವಜನಿಕವಾದಂಥ ಸ್ವತ್ತನ್ನು ತಮ್ಮ ಸ್ವಂತದ ಉಪಯೋಗಕ್ಕಾಗಿ ಹೀನಾಯಮಾನವಾಗಿ ಕಳುವು ಮಾಡುತ್ತಿದ್ದರೋ ಅವನ್ನು ತಡೆಗಟ್ಟುವುದಕ್ಕಾಗಿ ಇಂತಹ ಕಾನೂನು ಇರಬೇಕಾಗುತ್ತದೆ. ಇಲ್ಲಿಯವರೆಗೆ ವಿಂಕೋ ಫ್ಯಾಕ್ಟರಿಯವರು ಸಾಕಷ್ಟು ಅರಣ್ಯವನು ನಾಶಪಡಿಸಿದ್ದಾರೆ. ಇನ್ನು ಮುಂದೆ ಇಲಾಖೆಯವರೇ ಅತ್ಯುತ್ತಮವಾದಂಥ ಮರಗಳನ್ನು ಕಡಿದು ಸರ್ಕಾರದ ಡಿಪೋಗಳ ಮೂಲಕ ಅವರಿಗೆ ಒದಗಿಸಿದರೆ ಆದರೆ ಅರಣ್ಯ ನಾಶವಾಗುವುದು ತಪ್ಪುತ್ತದೆ. ಇದನ್ನು ಬಿಟ್ಟರೆ ಬೇರೆ ಪರಿಹಾರವೇ ಇಲ್ಲ. ಇಂತಹ ಒಂದು ಯೋಚನೆ ಸರ್ಕಾರದ ಲಕ್ಷ್ಯದಲ್ಲಿ ಬರುತ್ತಿದೆ. ಆದಕಾರಣ ಇದಕ್ಕೆ ಸರ್ವರೂ ತಮ್ಮ ಒಪ್ಪಿಗೆ ಕೊಡುತ್ತಾರೆಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲ್ಲಾಯ (ಬಂಟವಾಳ).—ಸನ್ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆಗೆ ನಾನು ಸಂಪೂರ್ಣವಾದ ಬೆಂಬಲವನ್ನು ಸೂಚಿಸುತ್ತೇನೆ. ಇದರ ಉದ್ದೇಶ ಬಹಳ ಉತ್ತಮವಾದುದು. ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತನ್ನು ಬೆಳೆಸಬೇಕು ಮತ್ತು ಈಗ ನಷ್ಟವಾಗುತ್ತಿರುವುದನ್ನು ತಡೆಯಬೇಕು ಎಂಬುದೇ ಇದರ ಮೂಲ ಉದ್ದೇಶವಾಗಿದೆ. ಇಲ್ಲಿಯವರೆಗೆ ಸ್ವಂತ ಜಮೀನುಗಳಲ್ಲಿರತಕ್ಕಂಥ ಮರಗಳನ್ನು ಕಡಿಯುವುದಕ್ಕೆ ಅನಿರ್ಭಂದಿತವಾದಂಥ ಒಂದು ಅವಕಾಶ ಮಾಲೀಕರಿಗೆ ಇತ್ತು. ಅದು ಇನ್ನು ಮುಂದೆ ಇಲ್ಲವಾಗಿದೆ. ನಾನು ಪಶ್ಚಿಮ ಘಟ್ಟಗಳ ತಪ್ಪಲಿನಿಂದ ಬರುವ ಸದಸ್ಯನಾಗಿದ್ದೇನೆ. ಆದಕಾರಣ ಈ ವಿಚಾರದಲ್ಲಿ ನನಗೆ ಸಾಕಷ್ಟು ಅನುಭವವಿದೆ ಬೆಳ್ತಂಗಡಿ, ಸೂಳ್ಯ, ಪುತ್ತೂರು ಈ ಭಾಗಗಳಲ್ಲಿ ಬಹಳ ಉತ್ತಮವಾದಂಥ ಮರಗಳಿವೆ. ಸಾವಿರಾರು ಎಕರೆಗಳಷ್ಟು ಗಂಡ್ಡ ಪ್ರದೇಶ ಒಬ್ಬರ ಸ್ವಂತ ಪ್ರದೇಶವೆಂದು ಇಲ್ಲಿಯವರೆಗೆ ಕೆಲವರು ಅನುಭವಿಸಿಕೊಂಡು ಬಂದಿದ್ದರು, ಅಂತಹ ಪ್ರದೇಶಗಳಲ್ಲಿ ಬಹಳ ಉತ್ತಮವಾದಂಥ ಮರಗಳಿದ್ದವು. ಇಂತಹ ಮರಗಳನ್ನು ಕೆಲವರು ಇತ್ತೀಚೆಗೆ ಕಡಿದು ಲಕ್ಷಾಂತರ ರೂ.ಗಳನ್ನು ಸಂಪಾದನೆ ಮಾಡಿದ್ದಾರೆ. ಈ ಆರ್ಡಿನೆನ್ಸ್ ಬರುವುದಕ್ಕೆ ಮೊದಲು ಕೆಲವರು ಮರಗಳನ್ನು ಕಡಿದಿದ್ದರು. ಆದರೆ ಈ ಸುಗ್ರೀವಾಜ್ಞೆ ಬಂದ ಕಾರಣ ಆ ರೀತಿ ಕಡಿದಂಥ ಮರಗಳೆಲ್ಲಾ ಹಾಗೆಯೇ ಉಳಿದಿವೆ. ಈ ಒಂದು ಸುಗ್ರೀವಾಜ್ಞೆಯನ್ನು ಸರ್ಕಾರದವರು ಹೊರಡಿಸದಿದ್ದರೆ, ಸೀಲಿಂಗ್ ಲಿಮಿಟಿಗಿಂತ ಹೆಚ್ಚುವರಿ ಜಮೀನನ್ನು ಯಾರು ಯಾರು ಇಟ್ಟುಕೊಂಡಿದ್ದಾರೆ, ಅವರೆಲ್ಲಾ ತಮ್ಮ ಹೆಚ್ಚುವರಿ ಜಮೀನಿನಲ್ಲಿರತಕ್ಕಂಥ ಮರಗಳನ್ನು ಕಡಿದು ಖಾಲಿ ಸ್ಥಳವನ್ನು ಮಾತ್ರ ಸರ್ಕಾರಕ್ಕೆ ಕೊಡುತ್ತಿದ್ದರು.

ಆದ್ದರಿಂದ ಸಕಾಲದಲ್ಲಿ ಈ ಶಾಸನ ಸುಗ್ರೀವಾಜ್ಞೆ ರೂಪದಲ್ಲಿ ಬಂದಿದೆ. ಇದಕ್ಕಾಗಿ ನಾನು ಸರ್ಕಾರವನ್ನು ಸಂಪೂರ್ಣವಾಗಿ ಅಭಿನಂದಿಸುತ್ತೇನೆ. ಆದರೆ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯಗಾರರು ಸೊಪ್ಪನ್ನು ಗೊಬ್ಬರ ಮಾಡುವ ದಕ್ಕೋಸ್ಕರ ಉಪಯೋಗ ಮಾಡುತ್ತಿದ್ದಾರೆ. ಈ ಕಾನೂನಿಗೆ ಸಂಬಂಧಪಟ್ಟ ಸುಗ್ರೀವಾಜ್ಞೆ ಬಂದಮೇಲೆ ಇದಕ್ಕೆ ಕೂಡ ಆತಂಕ ಬಂದಿದೆ. ಶ್ರೀಮಾನ್ ಲಿಂಗಪ್ಪನವರು ಮತ್ತು ಶ್ರೀಮಾನ್ ಕೆ. ಎಫ್. ಪಾಟೀಲರು ಹೇಳಿದ ಹಾಗೆ ಒಂದು ತಿದ್ದುಪಡಿಯನ್ನು ತರಬೇಕೆಂದು ನಾನೂ ಅಪೇಕ್ಷಿಸುತ್ತೇನೆ. ಅಧಿಕೃತ ತಿದ್ದುಪಡಿ ಸೂಕ್ತವಾಗಿದೆ. ರಾಸಾಯನಿಕ ಗೊಬ್ಬರದ ಜೊತೆಗೆ ಆರ್ಗ್ಯಾನಿಕ್ ಗೊಬ್ಬರ ಸೊಪ್ಪು ಸೆದೆಗಳನ್ನು ಗದ್ದೆಗಳಿಗೆ ಹಾಕುವುದು ಅವಶ್ಯಕ ಇದೆ. ಈ ರೀತಿಯಾದ ಗೊಬ್ಬರವನ್ನು ವ್ಯವಸಾಯಕ್ಕೆ ಉಪಯೋಗಿಸಬೇಕು ಎಂದು ಎಲ್ಲಾ ತಜ್ಞರು ಹೇಳುತ್ತಾರೆ. ಆದ್ದರಿಂದ ಇದಕ್ಕೆ ಯಾವ ತರಹ ತಡೆಯನ್ನೂ ಮಾಡಬಾರದು. ಬಡ ರೈತರು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವುದಕ್ಕಿಂತ ಸೊಪ್ಪಿನ ಗೊಬ್ಬರವನ್ನು ಉಪಯೋಗಿಸುವುದು ಜಾಸ್ತಿಯಾಗಿದೆ. ಆದರೆ ಇದರಿಂದ ಯಾವರೀತಿಯ ಅರಣ್ಯವೂ ನಾಶವಾಗುವುದಿಲ್ಲ. ರೈತರು ಮರಗಳಲ್ಲಿ ಸೊಪ್ಪನ್ನು ತೆಗೆದು ಗೊಬ್ಬರಕ್ಕೆ ಉಪಯೋಗಿಸಿಕೊಂಡು ಕಾಂಡವನ್ನು ಹಾಗೆಯೇ ಬಿಟ್ಟು ಮತ್ತೇ ಮರದಲ್ಲಿ ಸೊಪ್ಪನ್ನು ಬೆಳೆಸುತ್ತಾರೆ. ಅವರು ಅದನ್ನು ಕಾಯುತ್ತಾರೆ. ಅದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟರೆ ರೈತರು ಅವರವರ ಕ್ಷೇತ್ರದಲ್ಲಿ ಇರುವಂತಹ ಸೊಪ್ಪು ಬೆಳೆಯುವಂತಹ ಗಿಡ ಮರಗಳನ್ನು ಖಂಡಿತವಾಗಿಯೂ ರಕ್ಷಣೆ ಮಾಡುತ್ತಾರೆ. ಆದ್ದರಿಂದ ಇದನ್ನು ಕಾಯಿದೆಯ ವ್ಯಾಪ್ತಿಯಿಂದ ಹೊರತು ಪಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವ್ಯವಸಾಯಕ್ಕೆ ಬೇಕಾದ ಉಪಕರಣಗಳು ಎಂದರೆ ನೇಗಿಲು, ನೊಗ, ಮತ್ತು ಇತರ ಕಬ್ಬಿಣದ ವ್ಯವಸಾಯದ ಉಪಕರಣಗಳಿಗೆ ಹಿಡಿಯನ್ನು ಮರದಿಂದಲೇ ಮಾಡಬೇಕಾಗುತ್ತದೆ. ಹಾಗೆ ಬೇಕಾಗುವಂತಹ ಹಿಡಿಗೆ ೫½ ಸೆಂಟಿಮೀಟರ್ ದಪ್ಪದ ಕಾಂಡ ಬೇಕಾಗುತ್ತದೆ. ಈ ದೃಷ್ಟಿಯಿಂದ ರೈತನು ವ್ಯವಸಾಯದ ಉಪಕರಣಗಳಿಗೆ ಉಪಯೋಗ ಮಾಡತಕ್ಕಂಥಾ ಮರ ಕಡಿಯುವುದಕ್ಕೆ ಯಾವ ಆತಂಕವೂ

ಇರಬಾರದು. ಅದಕ್ಕೆ ಬೇಕಾದ ವಿನಾಯಿತಿಯನ್ನು ಈ ಕಾನೂನಿನಲ್ಲಿ ಅಳವಡಿಸುವುದು ಉತ್ತಮ. ವ್ಯವಸಾಯಕ್ಕೋಸ್ಕರ ಸೊಪ್ಪು ತೆಗೆದುಕೊಳ್ಳತಕ್ಕಂಥಾ ರೈತರಿಗೆ ಫಾರೆಸ್ಟ್ ಇಲಾಖೆಯವರು ಆತಂಕವನ್ನುಂಟು ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ನಮ್ಮ ಬಂಟ್ವಾಳ ತಾಲ್ಲೂಕಿನಲ್ಲಿ ಒಂದು ಘಟನೆ ನಡೆಯಿತು. ಆಗಸ್ಟ್ 15ನೇ ತಾರೀಖು ಸ್ವತಂತ್ರ ದಿನಾಚರಣೆ. ಅದರ ಹಿಂದಿನ ದಿವಸ ಎರಡನೇ ಶನಿವಾರ ರಜಾದಿನ. ಅದರ ಹಿಂದಿನ ದಿವಸವೇ ಬಹಳ ಬುದ್ಧಿವಂತರಾದ ಭೂಮಾಲೀಕರು ತಮ್ಮ ಗೇಣಿದಾರನ ಜಮೀನಿನಲ್ಲಿರತಕ್ಕ ಒಂದು ಮರವನ್ನು ಕಡಿಯುವುದಕ್ಕೆ ತಹಸೀಲ್ದಾರರಿಗೆ ಅರ್ಜಿಯನ್ನು ಬರೆದು ಆ ಮರ ಪಕ್ಕದ ಮನೆಯವರ ಮೇಲೆ ಬಿದ್ದು ತೊಂದರೆಯಾಗುತ್ತದೆ ಎಂದು ಆ ಮರವನ್ನು ಕಡಿಯುವುದಕ್ಕೆ ಅನುಮತಿ ಕೊಡಬೇಕೆಂದು ಹೇಳಿದರು ಅದೇ ದಿನ ರೆವಿನ್ಯೂ ಇನ್‌ಸ್ಪೆಕ್ಟರ್ ಹತ್ತಿರ ಶಿಫಾರಸು ತೆಗೆದುಕೊಂಡು ತಹಸೀಲ್ದಾರರಿಗೆ ಕೊಟ್ಟು ಅವರಿಂದ ಪರವಾನಗಿ ಪಡೆದುಕೊಂಡರು. ಆಮೇಲೆ ಭೂಮಾಲಿಕರು ಮರವನ್ನು ಕಡಿದು ಅಲ್ಲಿಯೇ ಬಿಟ್ಟಿದ್ದರು. ಆ ದಿವಸ ರೈತ ಗೇಣಿದಾರ ಟ್ರಿಬ್ಯುನಲ್ಲಿಗೆ ಅರ್ಜಿಯನ್ನು ಹಾಕುವುದಕ್ಕೆ ರಜಾ ಇದ್ದುದರಿಂದ 16ನೇ ತಾರೀಖು ರೈತ ಟ್ರಿಬ್ಯುನಲ್ಲಿಗೆ ಬಂದು ತನ್ನ ಜಾಗದಲ್ಲಿ ಇದ್ದಂತಹ ಮರವನ್ನು ಭೂಮಾಲಿಕ ಕಡಿದಿದ್ದಾನೆ ಎಂದು ಹೇಳಿದ ಮೇಲೆ ಅವರು ಪೋಲೀಸಿಗೆ ಕಂಪ್ಲೇಂಟ್ ಕೊಟ್ಟರು. ಅದಕ್ಕೆ ಪೋಲೀಸಿನವರು ತಹಸೀಲ್ದಾರರ ಆಜ್ಞೆಯ ಪ್ರಕಾರ ಭೂಮಾಲೀಕರು ಮರವನ್ನು ಕಡಿದಿದ್ದಾರೆ ಎಂದು ಹೇಳಿದರು. ಅನಂತರ ಟ್ರಿಬ್ಯುನಲ್‌ನವರು ಆ ಭೂಮಾಲಿಕರಿಗೆ ತನಿಖೆಯಾಗುವ ತನಕ ಮರವನ್ನು ಬೇರೆ ಕಡೆ ಸಾಗಿಸಬಾರದು ಎಂದು ಸ್ಟೇ ಆರ್ಡರ್ ಕೊಟ್ಟಿದ್ದಾರೆ. ಈ ರೀತಿ ಕೆಲವು ಭೂಮಾಲೀಕರು ಮರವನ್ನು ಕಡಿದು ಮಾರಾಟ ಮಾಡುವುದು ನಡೆಯುತ್ತಿದೆ. ರೈತ ಸೊಪ್ಪು ಕಡಿದರೂ ಕೂಡ ಅದನ್ನು ಫಾರೆಸ್ಟ್ ಇಲಾಖೆಯವರು ತಡೆಯುತ್ತಾರೆ. ಹುಣಸೆ ಮಾವು ಮತ್ತು ಹಲಸು ಮುಂತಾದ ಹಣ್ಣಿನ ಮರಗಳನ್ನು ಕಡಿಯದಂತೆ ಒಂದು ಸರಿಯಾದ ಹತೋಟಿಯನ್ನು ಇಟ್ಟು ಈ ಕಾನೂನು ಸದುಪಯೋಗವಾಗುವ ಹಾಗೆ ಮಾಡಿ ಮರಗಳನ್ನು ರಕ್ಷಣೆ ಮಾಡಬೇಕು ಇದರಿಂದ ಸಾಮಾನ್ಯ ಜನಗಳಿಗೆ ತೊಂದರೆಯಾಗಬಾರದು. ಯಾವ ಅಧಿಕಾರಿಗಳು ಈ ಕಾನೂನನ್ನು ದುರುಪಯೋಗ ಮಾಡಿಕೊಂಡು ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡುತ್ತಾರೆ ಅಂಥವರ ಮೇಲೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಒಟ್ಟಿನಲ್ಲಿ ಈ ಶಾಸನ ಜಾರಿಗೆ ಬಂದ ಮೇಲೆ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಅದರಿಂದ ನಮ್ಮ ರಾಜ್ಯದಲ್ಲಿರತಕ್ಕ ಮರಗಳ ಬೆಳವಣಿಗೆಯಾಗಿ ಅರಣ್ಯ ಸಂಪತ್ತನ್ನು ಬೆಳೆಸುವುದರ ಜೊತೆಗೆ ಮರಗಳೂ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಅದರಿಂದ ಇಡೀ ರಾಜ್ಯ ಸುಭಿಕ್ಷವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಈ ಒಂದು ಶಾಸನವನ್ನು ತಂದಿದ್ದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್). – ಮಾನ್ಯ ಉಪಾಧ್ಯಕ್ಷರೇ ಮಾನ್ಯ ಅರಣ್ಯ ಶಾಖೆಯ ಸಚಿವರು ನಮ್ಮ ರಾಜ್ಯದಲ್ಲಿ ಮರಗಳನ್ನು ಸಂರಕ್ಷಣೆ ಮಾಡತಕ್ಕ ಒಂದು ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದಾರೆ. ಇದರಲ್ಲಿ ಅಡಗಿರತಕ್ಕ ಉದ್ದೇಶವನ್ನು ನಾನು ಒಪ್ಪುವುದಾದರೂ ಕೂಡ ಇದರಲ್ಲಿರತಕ್ಕ ಕೆಲವು ವಿಧಿಗಳನ್ನು ನಾನು ವಿರೋಧ ಮಾಡಬೇಕಾಗಿದೆ. ಇವೊತ್ತು ದೇಶದಲ್ಲಿ ಮರದ ಅರಣ್ಯ ಸಂಪತ್ತು ಸಹಜವಾಗಿ ಬೇಕಾಗಿರತಕ್ಕದ್ದು ಮತ್ತು ಇದರ ಸಂರಕ್ಷಣೆ ಆಗಬೇಕಾಗಿರತಕ್ಕದ್ದು ಎಲ್ಲಾ ನಾಗರೀಕರ ಮತ್ತು ಸರ್ಕಾರದ ಜವಾಬ್ದಾರಿ ಇದೆ. ಆದರೆ ಈ ಜವಾಬ್ದಾರಿಯನ್ನು ಎಷ್ಟರಮಟ್ಟಿಗೆ ಸರ್ಕಾರದವರು ನಿರ್ವಹಿಸಿಕೊಂಡು ಅರಣ್ಯ ಸಂರಕ್ಷಣೆ ಮಾಡಿಕೊಂಡು ಬಂದಿದ್ದಾರೆ ಎಂದರೆ ಅರಣ್ಯವನ್ನು ನಾಶ ಮಾಡತಕ್ಕ ಕೆಲಸವನ್ನು ಸಾರೋಧ್ಧಾರವಾಗಿ ಮಾಡುತ್ತಾ ಬಂದಿದ್ದಾರೆ. ಅದಕ್ಕೆ ನಿದರ್ಶನಗಳು ಒಂದಲ್ಲ. ಸಾವಿರಾರು ನಿದರ್ಶನಗಳು ಇವೆ. ಮಲೆನಾಡು ಪ್ರಾಂತ್ಯದಲ್ಲಿಯಾಗಲೀ ಬಯಲು ಪ್ರದೇಶದಲ್ಲಾಗಲೀ ನೋಡಿದರೆ ಇದು ಚೆನ್ನಾಗಿ ಅರ್ಥವಾಗುತ್ತದೆ. ನಾನು ಇತ್ತೀಚೆಗೆ ಮಲೆನಾಡಿಗೆ ಹೋಗಿ ಬಂದೆ. ಅಲ್ಲಿ ಆಗಿರತಕ್ಕ ಅನಾಹುತವನ್ನು ನೋಡಿದರೆ ಬಹುಶಃ ಯಾವ ನಾಗರೀಕರೂ ಸಹ ವ್ಯಥೆ ಪಡದೆ ಇರಲಾರರು ಅಲ್ಲಿ ಭೀಕರವಾದ ಅರಣ್ಯ ನಾಶ ಮಾಡತಕ್ಕ ಕೆಲಸ ನಡೆದಿದೆ. ಇನ್ನೊಂದು ಕಡೆ ಇದ್ದಂತಹ ದಟ್ಟವಾದ ಅರಣ್ಯವನ್ನು ಕಡಿದು ಬೋಳು ಕಾಡು ಮಾಡಿಬಿಟ್ಟಿದ್ದಾರೆ. ಕೆಲವು ಕಡೆ ಯಾವ ಮರವನ್ನು ಬೆಳೆಯುವುದಕ್ಕೆ ಸಾಧ್ಯವಿದೆಯೋ ಅಂಥಾ ಮರಗಳನ್ನು ಬೆಳೆಸುತ್ತಾ ಇಲ್ಲ. ಕೆಲವು ಕಡೆ ಬೇಕಾದಷ್ಟು ಬೆಲೆ ಬಾಳತಕ್ಕ ತೇಗ, ಹೊನ್ನೆ ಮತ್ತು ಮತ್ತಿ ಮರಗಳು ಇದ್ದುದನ್ನು ಕಡಿದು ಅದರ ಜಾಗದಲ್ಲಿ ನೀಲಗಿರಿ ಮರಗಳನ್ನು ಬೆಳೆಸಿದ್ದಾರೆ. ನಮ್ಮ ಸರ್ಕಾರದ ನೀತಿಯೇ ನಮಗೆ ಅರ್ಥವಾಗುವುದಿಲ್ಲ. ನಮ್ಮ ದೇಶದಲ್ಲಿ ಅನೇಕ ಕಡೆ ನೀಲಗಿರಿ ಮರಗಳನ್ನು ಬೆಳೆಸಿದ್ದಾರೆ. ಖಂಡಿತವಾಗಿಯೂ ಅದನ್ನು ಬೆಳೆಸತಕ್ಕದ್ದೆ ಅದು ದೇಶದ

ಸಂಪತ್ತನ್ನು ಅದನ್ನು ನಾನು ಒಪ್ಪುತ್ತೇನೆ. ಈ ನೀಲಗಿರಿ ಮರಗಳನ್ನು ನೂರಾರು ಎಕರೆಯಲ್ಲಿ ಬೆಳೆದು ಅವುಗಳನ್ನು ಸರ್ಕಾರದವರು ಮಾರಾಟ ಮಾಡುತ್ತಾರೆ. ಈಗ ಅನೇಕ ಗ್ರಾಮಗಳಲ್ಲಿ ಅನೇಕರಿಗೆ ಒಂದು ಅಂಗುಲ ಜಮೀನು ಕೂಡ ಇಲ್ಲದೆ ಇರುವವರೂ ಇದ್ದಾರೆ ಅವರಿಗೆ ಜಮೀನು ಕೊಡದೆ ನೂರಾರು ಸಾವಿರಾರು ಎಕರೆ ಜಮೀನಿನಲ್ಲಿ ನೀಲಗಿರಿ ಮರಗಳನ್ನು ಬೆಳೆದು ಯಾರಿಗೆ ಮಾರಾಟ ಮಾಡುತ್ತಾರೆ ಎಂದರೆ ದೇಶದಲ್ಲಿ ಕಡುಬಡವರಾಗಿರತಕ್ಕ ಬಿರ್ಲಾ ಅವರ ಕಂಪನಿಗೆ ಮಾರಾಟ ಮಾಡುತ್ತಾರೆ.

6-00 P.M.

ಪಾಪ ಅವರು ಬಹಳ ಬಡವರು, ಹೆಚ್ಚಿಗೆ ಬೆಲೆ ಕೊಟ್ಟು ಕೊಂಡುಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇಲ್ಲ. ಅವರು ಈ ದೇಶದಲ್ಲಿ ಎರಡನೇ ಬಂಡವಾಳಗಾರರು. ಅವರು ನಿರ್ಗತಿಕರು, ಮತ್ತೆ ಅವರಿಗೆ ಯಾವ ವಿಧವಾಗಿಯೂ ಹೆಚ್ಚಿನ ಬೆಲೆ ಕೊಡುವುದಕ್ಕೆ ಶಕ್ತಿ ಇಲ್ಲ. ಅಂತಹವರಿಗೆ ಇವತ್ತಿನ ದಿವಸ ಬಿಸಾಕುವ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಇದೇ ಸದನದಲ್ಲಿ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಅವರಿಗೆ ಮಾರಾಟ ಮಾಡತಕ್ಕ ಬೆಲೆಯನ್ನು ಹೆಚ್ಚಿಸುತ್ತೇವೆ, ಅಗ್ರಿಮೆಂಟ್ ಇದೆ ಎಂದು ಹೇಳಿದ್ದರು. ಈ ದೇಶದ ರಾಜ್ಯಾಂಗವೇ ಗಾಳೀಪಟದ ಹಾಗೆ ಆಗುವಂಥ ಸಂದರ್ಭವಿರುವಾಗ ಅವರಿಗೂ ಸರ್ಕಾರಕ್ಕೂ ಆಗಿರತಕ್ಕ ಅಗ್ರಿಮೆಂಟ್, ಒಪ್ಪಂದ ಯಾವ ಲೆಕ್ಕ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಸರ್ಕಾರ ಮಾರುಕಟ್ಟೆಯಲ್ಲಿ ಮಾರಾಟ ಮಾಡತಕ್ಕ ಬೆಲೆಯನ್ನೂ ಇವರಿಗೆ ಕೊಡತಕ್ಕ ಬೆಲೆಯನ್ನು ಗಣನೆಗೆ ತೆಗೆದುಕೊಂಡರೆ ಒಂದು ವರ್ಷಕ್ಕೆ ಹತ್ತಾರು ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ನಷ್ಟವಾಗುತ್ತಾ ಇದೆ. ಈ ಬಿಲ್ಲನ್ನು ತಂದಿರತಕ್ಕ ಉದ್ದೇಶವನ್ನು, ಆ ಒಂದು ಚಿತ್ರವನ್ನು ನಾವು ನೋಡುವುದಾದರೆ ನಾವು ಮರವನ್ನು, ಅರಣ್ಯ ಸಂಪತ್ತನ್ನು ಉಳಿಸುವುದಕ್ಕೋಸ್ಕರ ಈ ಕಾನೂನನ್ನು ತಂದಿದ್ದೇವೆ ಎಂದು ತೋರಿಸುವ ನೆಪದಲ್ಲಿ ಅರಣ್ಯವನ್ನು ನಾಶ ಮಾಡುವುದಕ್ಕೆ ಮತ್ತು ತಮ್ಮ ಜೋಬನ್ನು, ತಮ್ಮ ಬೊಕ್ಕಸವನ್ನು ತುಂಬಿಸಿಕೊಳ್ಳುವುದಕ್ಕೆ ಸರ್ಕಾರದಲ್ಲಿ ನಿರಂತರವಾಗಿ ಕಾರ್ಯಭಾರ ನಡೆಸತಕ್ಕವರು ನಡೆಸಿಕೊಂಡು ಬಂದಿದ್ದಾರೆ. ಈ ಬಿಲ್ಲಿನ ನಿಜವಾದ ಸ್ವರೂಪದ ಪ್ರತಿಬಿಂಬ ಇವತ್ತು ಆಗುತ್ತಾ ಇಲ್ಲ. ಯಾರಿಗೆ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದೀರೋ ಅವರಿಂದ ನ್ಯಾಯಸಮ್ಮತ ಬೆಲೆಯನ್ನು ವಸೂಲು ಮಾಡಿ, ರಾಜ್ಯದ ಬೊಕ್ಕಸಕ್ಕೆ ಹಣ ಬರುವ ರೀತಿಯಲ್ಲಿ ಏರ್ಪಾಟು ಮಾಡಿದ್ದರೆ ನಾನು ಒಪ್ಪುತ್ತಿದ್ದೆ. ಆದರೆ ಇವತ್ತಿನ ದಿವಸ ಅವರ ಆಜ್ಞಾಪಾಲಕರಾಗಿ ಅವರು ಹೇಳಿದಂಥ ಬೆಲೆಗೆ ನಮ್ಮ ನೀಲಗಿರಿ ಮರಗಳನ್ನು ಬಲಿ ಕೊಡುತ್ತಾ ಇದ್ದಾರೆ. ನೀವು ಯಾವ ಕಣ್ಣುಮುಚ್ಚಾಟ ಆಡಿ ಮೊಸಳೆ ಕಣ್ಣೀರನ್ನು ಸುರಿಸುವುದಕ್ಕೆ ಹೊರಟಿದ್ದೀರಿ ಎಂದು ನಾನು ಇವತ್ತು ಪ್ರಶ್ನೆ ಮಾಡಬೇಕಾಗಿದೆ. ನಿಮಗೆ ಅವರಿಂದ ಹೆಚ್ಚು ಬೆಲೆಯನ್ನು ಪಡೆಯುವುದಕ್ಕೆ ಯಾವ ಅಡ್ಡಿ ಆತಂಕ ಇದೆಯೋ ನನಗಂತೂ ಅರ್ಥವಾಗುತ್ತಾ ಇಲ್ಲ. ಹಿಂದೆ ಅರಣ್ಯ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಕೆ. ಎಚ್. ಪಾಟೀಲರು ಅವರು ನ್ಯಾಯ ಬೆಲೆಯನ್ನು ಕೊಡುವುದಕ್ಕೆ ಒಪ್ಪದೇ ಹೋದರೆ ರಾಷ್ಟ್ರೀಕರಣ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರು. ಇವತ್ತಿನ ದಿವಸ ಅದು ಎಲ್ಲಿ ಹೋಯಿತು ಎಂದು ಕೇಳುತ್ತೇನೆ. ಒಂದು ಕಡೆ ವ್ಯವಸಾಯಕ್ಕೆ ಭೂಮಿ ಕೊಡುವುದಿಲ್ಲ. ನೀಲಗಿರಿ ಮರಗಳನ್ನು ಬೆಳೆಸಿ ದೊಡ್ಡ ದೊಡ್ಡ ಬಂಡವಾಳಶಾಹಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ನಾಳೆ ಮುಂದುವರೆಸಬಹುದು.

The house will now adjourn and meet tomorrow at 1 p.m.

The House adjourned at Five Minutes past Six of the Clock to meet at One of the Clock on Wednesday, the 10th November 1976.